# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY



Spend LESS and get MORE publicity
BENEFITS OF ADVERTISING
in Local Leading HAMPI TIMES Newspaper
1. Flexibility
2. Timeliness
3. Affordability
4. Engaged audience
5. Positive response
6. Targeted demographic
7. Trustworthy medium
8. Design options
ಹಂಪಿ ಟೈಮ್ಸ್
CALL US : 9448633038
Email us Your Advertisement Content to : hampitimes@gmail.com



ಸಂಪುಟ:01 Volume:01 • ಸಂಚಿಕೆ:161 Issue:161 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 19.11.2023 19.11.2023 • ಭಾನುವಾರ Sunday • ಪುಟ:04 Page:04 • ಬೆಲೆ:2 Rs:2







## ಮೈಕ್ರೋ ನ್ಯೂಸ್

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

### ವಿಶ್ವಕಪ್ ಫೈನಲ್ ಪಂದ್ಯಾವಳಿ ನೇರ ಪ್ರಸಾರ ವೀಕ್ಷಣೆಗೆ ಉಚಿತ ಪ್ರವೇಶ

**ಹಂಪಿ ಟೈಮ್ಸ್ ಬಳ್ಳಾರಿ**
ಬಳ್ಳಾರಿ ಜಿಲ್ಲಾಡಳಿತವು, ಐಸಿಸಿ ವಿಶ್ವಕಪ್ 2023ರ ಫೈನಲ್ ಪಂದ್ಯಾವಳಿಯ ನೇರ ಪ್ರಸಾರ ಉಚಿತ ವೀಕ್ಷಣೆ ಮಾಡಲು ನಗರದ ಡಾ.ರಾಜ್‌ಕುಮಾರ್ ರಸ್ತೆಯ ಬಿಡಿಎಎ ಫುಟ್‌ಬಾಲ್ ಮೈದಾನದಲ್ಲಿ ಎಲ್‌ಇಡಿ ಪರದೆ ವ್ಯವಸ್ಥೆ ಕಲ್ಪಿಸಲಾಗಿದೆ. ಐಸಿಸಿ ವಿಶ್ವಕಪ್ 2023ರ ಫೈನಲ್ ಪಂದ್ಯಾವಳಿಯು ಭಾರತ ಮತ್ತು ಆಸ್ಟ್ರೇಲಿಯಾ ನಡುವೆ ನ.19ರ ಭಾನುವಾರದಂದು ನಡೆಯಲಿದ್ದು, ಮ್ಯಾಚ್‌ನ ನೇರ ಪ್ರಸಾರವನ್ನು ಮಧ್ಯಾಹ್ನ 1.30ರಿಂದ ನಗರದ ಡಾ.ರಾಜ್‌ಕುಮಾರ್ ರಸ್ತೆಯ ಬಿಡಿಎಎ ಫುಟ್‌ಬಾಲ್ ಮೈದಾನದಲ್ಲಿ ಎಲ್‌ಇಡಿ ಪರದೆಯಲ್ಲಿ ವೀಕ್ಷಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ತಿಳಿಸಿದ್ದಾರೆ.

# ವಿಶ್ವಗುರು ಬಸವಣ್ಣನ ಕಂಚಿನ ಪುತ್ಥಳಿ ಅನಾವರಣ

## ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು ಹೇಳಿಕೆ | ನ.22ಕ್ಕೆ ಸಚಿವ ಈಶ್ವರ ಖಂಡ್ರೆ ಉದ್ಘಾಟನೆ | ಶಾಸಕ ಎಚ್.ಆರ್.ಗವಿಯಪ್ಪ ಅಧ್ಯಕ್ಷತೆ

**ಹಂಪಿ ಟೈಮ್ಸ್ ಹೊಸಪೇಟೆ**
ಜಗತ್ತಿಗೆ ಆದರ್ಶ ಪುರುಷ, ವಿಶ್ವಗುರು ಬಸವಣ್ಣನ ಅಶ್ವರೂಢ ಕಂಚಿನ ಪುತ್ಥಳಿಯನ್ನು ನ.22 ರಂದು ಬೆಳಿಗ್ಗೆ 10ಕ್ಕೆ ನಗರದ ಸಿದ್ದಿಪ್ರಿಯಾ ಕಲ್ಯಾಣ ಮಂಟಪದ ಮುಂಭಾಗದಲ್ಲಿ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಸಚಿವ ಈಶ್ವರ ಖಂಡ್ರೆ ಲೋಕಾರ್ಪಣೆಗೊಳಿಸಲಿದ್ದಾರೆ ಎಂದು ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು ಹೇಳಿದರು. ನಗರದ ಶ್ರೀ ಕೊಟ್ಟೂರುಸಂಸ್ಥಾನ ಮಠದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ವಿಜಯನಗರ ಜಿಲ್ಲಾ ಕೇಂದ್ರ ಹೊಸಪೇಟೆಯಲ್ಲಿ ಜಗಜ್ಯೋತಿ ಬಸವೇಶ್ವರರ ಪುತ್ಥಳಿ ಅನಾವರಣಗೊಳ್ಳುತ್ತಿರುವುದು ಹೆಮ್ಮೆಯ ಸಂಗತಿ. ಬಸವೇಶ್ವರರು ಕನ್ನಡ ನಾಡಿನ ಹೆಮ್ಮೆಯ ಪುರುಷರಾಗಿದ್ದರೆ. ಅಂದು ಅವರಿಲ್ಲದಿದ್ದರೆ, ಆದರ್ಶಮಯವಾಗಿರುವ ವಿಶ್ವ ಭ್ರಾತೃತ್ವ, ಸ್ನೇಹ, ಸಮಾನತೆ ಕಾಣಲು ಸಾಧ್ಯವಿರುತ್ತಿರಲಿಲ್ಲವೇನೋ ಎನಿಸುತ್ತದೆ. ಬಸವಣ್ಣನವರು ಒಂದು ಜಾತಿ, ಧರ್ಮಕ್ಕೆ, ಒಂದು ನಾಡಿಗೆ ಸೀಮಿತವಾದವರಲ್ಲ. ಇಡೀ ವಿಶ್ವವೇ ಗೌರವಿಸುವಂತ ಆದರ್ಶ ಪುರುಷರಾಗಿದ್ದಾರೆ. 900 ವರ್ಷಗಳ ಹಿಂದೆಯೇ ಜ್ಯಾತ್ಯಾತೀತ, ಮನುಕುಲ, ಸಕಲ ಜೀವರಾಶಿಗೆ ಲೇಸನ್ನು ಬಯಸಿದವರಾಗಿದ್ದರೆ.



ಹಂಪಿ ಹೇಮಕೂಟ ಶೂನ್ಯ ಸಿಂಹಾಸನಾಧೀಶ್ವರ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠದ ಹತ್ತೊಂಬತ್ತನೆ ಪೀಠಾಧಿಪತಿಗಳಾದ ಶ್ರೀ ಜಗದ್ಗುರು ಡಾ. ಸಂಗನಬಸವ ಮಹಾಸ್ವಾಮಿಗಳವರ ಪಟ್ಟಾಧಿಕಾರ ಸುವರ್ಣ ಮಹೋತ್ಸವ ಸ್ಮರಣಾರ್ಥ ವಿಜಯನಗರ ಜಿಲ್ಲಾ ಕೇಂದ್ರದಲ್ಲಿ ಲೋಕಾರ್ಪಣಗೊಳ್ಳಲಿದೆ. ಜಗದ್ಗುರು ಶ್ರೀ ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು ಮತ್ತು ವಳ್ಳಬಳ್ಳಾರಿಯ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಸಾನ್ನಿಧ್ಯವಹಿಸುವರು. ವಸತಿ ವಕ್ಫ್ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹಾಗೂ ವಿಜಯನಗರ ಜಿಲ್ಲಾ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಉಪಸ್ಥಿತರಿರಲಿದ್ದಾರೆ. ಶಾಸಕ ಎಚ್.ಆರ್.ಗವಿಯಪ್ಪ ಅಧ್ಯಕ್ಷತೆವಹಿಸುವರು. ಮಾಜಿ ಸಚಿವ ಆನಂದಸಿಂಗ್, ಶಾಸಕ ವಿನಯ ಕುಲಕರ್ಣಿ, ಸಂಸದರಾದ ವೈ.ದೇವೇಂದ್ರಪ್ಪ, ಕರಡಿ ಸಂಗಣ್ಣ, ಶಾಸಕರಾದ ಲತಾ ಮಲ್ಲಿಕಾರ್ಜುನ, ಕೆ.ನೇಮಿರಾಜ ನಾಯ್ಕ, ಡಾ.ಎನ್.ಟಿ.ಶ್ರೀನಿವಾಸ, ಕೃಷ್ಣ ನಾಯ್ಕ್.ಎಲ್, ವಿಧಾನಪರಿಷತ್ ಸದಸ್ಯ ವೈ.ಸತೀಶ್ ರೆಡ್ಡಿ, ಮಾಜಿ ಸಚಿವ ಹಾಲಪ್ಪ ಆಚಾರ್, ಮಾಜಿ ಶಾಸಕ ಪರಣ್ಣ ಮುನವಳ್ಳಿ, ಬಳ್ಳಾರಿ ವೀರಶೈವ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಆರ್.ರಾಮನಗೌಡ್ರು, ಕಾರ್ಯದರ್ಶಿ ಎಚ್.ಎಂ.ಗುರುಸಿದ್ದಸ್ವಾಮಿ, ಕೋಶಾಧ್ಯಕ್ಷ ಗೋನಾಳ ರಾಜಶೇಖರಗೌಡ್ರು, ನಗರಸಭೆ ಅಧ್ಯಕ್ಷೆ ಎ.ಲತಾ ಉಪಸ್ಥಿತರಿರಲಿದ್ದಾರೆ ಎಂದು ತಿಳಿಸಿದೆ.

ತಾಲೂಕು ನಿಕಟಪೂರ್ವ ಅಧ್ಯಕ್ಷ ಕೆ.ಕೊಟ್ರೇಶ ಮಾತನಾಡಿ, ಸಚಿವರು ಬಸವೇಶ್ವರ ಪುತ್ಥಳಿ ಲೋಕಾರ್ಪಣೆ ನಂತರ 10ಕ್ಕೂ ಅಧಿಕ ಕಲಾತಂಡಗಳೊಂದಿಗೆ, ಕಾಲೇಜು ರಸ್ತೆ, ರೋಟರಿ ವೃತ್ತ ಮಾರ್ಗವಾಗಿ ಶ್ರೀಮಠದವರೆಗೆ ಮೆರವಣಿಗೆ ಸಾಗಿಬರಲಿದೆ. ಮೆರವಣಿಗೆಯಲ್ಲಿ ನಗರ ಸೇರಿದಂತೆ ತಾಲೂಕಿನ ಗ್ರಾಮಸ್ಥರು, ವಿವಿಧ ಜಿಲ್ಲೆಗಳ ಮುಖಂಡರು, ಸಮಾಜಬಾಂಧವರು ಭಾಗವಹಿಸಲಿದ್ದಾರೆ. ಮಠದಲ್ಲಿ ಸಂಜೆ ಬಸವದರ್ಶನ ಪ್ರವಚನ ಮಂಗಲಮಹೋತ್ಸವ ಜರುಗಲಿದೆ ಎಂದರು.

ವೀರಶೈವ ಲಿಂಗಾಯತ ಸಮಾಜ ಹಿರಿಯ ಮುಖಂಡರಾದ ಸಾಲಿಸಿದ್ದಯ್ಯಸ್ವಾಮಿ, ಗೊಗ್ಗ ಚನ್ನಬಸವರಾಜ, ಕೋರಿಶೆಟ್ಟಿ ಲಿಂಗಪ್ಪ, ಎಚ್.ವಿ.ಶರಣಸ್ವಾಮಿ, ಕೆ.ರವಿಶಂಕರ, ಬಿ.ಮಲ್ಲೇಶಪ್ಪ, ಜಾಲಿ ಪ್ರಕಾಶ, ಚಿತ್ತಪ್ಪ, ಅಶ್ವಿನ್ ಕೋತಂಬ್ರಿ, ಜೆ.ಕಾರ್ತೀಕ ಇತರರು ಇದ್ದರು.




ಹಂಪಿ ಟೈಮ್ಸ್ ಸಂ|ಪಾ|ದ|ಕೀ|ಯ

## ದೇಶ ಸೇವೆಯೆಂದರೆ ಹೀಗೂ ಮಾಡಬಹುದು

ನಾವೆಲ್ಲ ಭಾರತೀಯರು, ದೇಶಭಕ್ತರೂ ಕೂಡಾ. ದೇಶಕ್ಕಾಗಿ, ದೇಶ ರಕ್ಷಣೆಗಾಗಿ, ದೇಶದ ಅಭಿವೃದ್ಧಿಯಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳುವುದು ನೈತಿಕ ಕರ್ತವ್ಯ. ಸಾಮಾನ್ಯವಾಗಿ ದೇಶಸೇವೆ ಎಂದರೆ ಸೈನಿಕನಾಗಿ ಗಡಿಯಲ್ಲಿ ನಿಂತು, ಶತ್ರುಗಳಿಂದ ನಮ್ಮ ದೇಶವನ್ನು ಕಾಪಾಡುವುದು, ಅಗತ್ಯ ಬಂದರೆ ಶತ್ರುಗಳನ್ನು ಸದೆಬಡಿಯುವುದು, ದೇಶದೊಳಗಿನ ಜನರ ರಕ್ಷಣೆಗಾಗಿ ಗಡಿಯಲ್ಲಿ ನಿಂತು ಹೋರಾಡುವುದು ಎಂಬ ಸನ್ನಿವೇಶ ನಮ್ಮ ಮನದಲ್ಲಿ ಬರುತ್ತದೆ. ಇದು ಸತ್ಯವೂ ಹೌದು. ಆದರೆ, ದೇಶಸೇವೆ ಕೈಗೊಳ್ಳಲು ಗಡಿಯಲ್ಲಿ ಸೈನಿಕನಾಗಿ ನಿಂತುಕೊಳ್ಳುವ ಜತೆಗೆ ದೇಶದೊಳಗೇ ಇದ್ದುಕೊಂಡು ದೇಶಸೇವೆ ಮಾಡುವ ಕೆಲಸಗಳು ಸಾಕಷ್ಟಿವೆ. ಎಲ್ಲರೂ ಸೈನಿಕರಾಗಲು ಸಾಧ್ಯವಿಲ್ಲ. ಹೀಗಾಗಿ ಜನ ಸಾಮಾನ್ಯರು ದೇಶದೊಳಗೇ ಇದ್ದುಕೊಂಡು, ನೀವು ವಾಸಿಸುವ ಸ್ಥಳದಲ್ಲೇ ದೇಶಸೇವೆ ಕೈಗೊಳ್ಳುವ ವಿಪುಲ ಅವಕಾಶಗಳಿವೆ. ಇದಕ್ಕಾಗಿ ನಾವು ಉತ್ತಮ ನಾಗರಿಕರಾಗುವ ಅವಶ್ಯಕತೆಯಿದೆ. ಉತ್ತಮ ನಾಗರಿಕರಾಗುವ ಮೂಲಕವೇ ದೇಶಸೇವೆ ಕೈಗೊಳ್ಳಬಹುದು. ದೇಶಸೇವೆಗಾಗಿ ನಾವೇನೂ ಪ್ರಾಣ ಅರ್ಪಿಸಬೇಕಿಲ್ಲ. ನಾವಿರುವ ಜಾಗದಿಂದಲೇ ದೇಶಕ್ಕೆ ಅಗತ್ಯವಿರುವ ಕೆಲಸಗಳನ್ನು, ಅಭಿವೃದ್ಧಿ ನಿಟ್ಟಿನಲ್ಲಿ ದೇಶ ಸಾಗಲು ಬೇಕಾದ ಪೂರಕ ಕೆಲಸಗಳನ್ನು ಮಾಡುವ ಮೂಲಕ ದೇಶಸೇವೆ ಕೈಗೊಳ್ಳಬಹುದು. ಇದರಲ್ಲಿ ಮೊದಲು ಬರುವುದು ಸ್ವಚ್ಛತೆ. ಮೊದಲಿಗೆ ನಿಮ್ಮ ಮನೆಯನ್ನು ನೀವು ಸ್ವಚ್ಛವಿಟ್ಟುಕೊಳ್ಳಿ. ನಿಮ್ಮ ಮನೆಯ ಶೌಚಾಲಯದಿಂದ ಹಿಡಿದು, ನಿಮ್ಮ ಮನೆಯ ಸುತ್ತಲಿನ ವಾತಾವರಣದಲ್ಲಿ ಸ್ವಚ್ಛತೆ ನೆಲೆಸುವಲ್ಲಿ ನಿಮ್ಮ ಶ್ರಮ ಅಗತ್ಯವಿದೆ. ನಿಮ್ಮ ಮನೆಯೊಳಗೆ ಎಷ್ಟು ಚೆನ್ನಾಗಿ ಕಸ ಬಳಿದು, ಶುಭ್ರವಾಗಿ ಇಟ್ಟುಕೊಳ್ಳುತ್ತಿದ್ದರೋ, ಅಷ್ಟೇ ನೀಟಾಗಿ ನಿಮ್ಮ ಮನೆಯ ಅಂಗಳ, ಸುತ್ತಮುತ್ತಲಿನ ಜಾಗವನ್ನೂ ಶುಭ್ರವಾಗಿ ಇಟ್ಟುಕೊಳ್ಳುವಲ್ಲಿ ಶ್ರಮಿಸಿ. ಕಸಕಡ್ಡಿ, ಕಲುಷಿತ ವಾತಾವರಣ ಇರದಂತೆ ನೋಡಿಕೊಳ್ಳಿ. ಹೀಗೆ ಪ್ರತಿ ಕುಟುಂಬವೂ ಸ್ವಚ್ಛತೆ ಕಡೆ ಗಮನ ನೀಡಿದರೆ ನೀವೂ ಆರೋಗ್ಯವಾಗಿರುತ್ತೀರಿ ಮತ್ತು ಸದೃಢ ದೇಹ ಹೊಂದುತ್ತೀರಿ. ಇದೇ ಅಲ್ಲವೇ ದೇಶಕ್ಕೆ ಬೇಕಾಗಿರುವುದು ? ಆರೋಗ್ಯ ಭಾರತ ನಿರ್ಮಾಣ ಮಾಡುವಲ್ಲಿ ಸಹ ದೇಶಸೇವೆಯಿದೆ. ಇದರೊಂದಿಗೆ ಅಕ್ಕಪಕ್ಕದವರ ಮನೆಯವರೊಂದಿಗೆ, ನಿಮ್ಮ ಬಂಧುಬಳಗದೊಂದಿಗೆ, ನಿಮ್ಮ ಸ್ನೇಹಿತರೊಂದಿಗೆ ಉತ್ತಮ ಬಾಂಧವ್ಯ ಬೆಳೆಸಿಕೊಳ್ಳಿ. ಅವರು ಕಷ್ಟದಲ್ಲಿ ಇದ್ದರೆ ನಿಮ್ಮ ಕೈಲಾದಷ್ಟು ನೆರವಾಗಿ. ನೆರವು ಸಾಧ್ಯವಾಗದಿದ್ದಲ್ಲಿ ಕೊನೇ ಪಕ್ಷ ಅವರಲ್ಲಿ ಧೈರ್ಯ ತುಂಬಿ. ನೆರೆಹೊರೆಯವರ ಕಾರ್ಯಕ್ರಮಗಳಲ್ಲಿ ಭಾಗಿಯಾಗಿ. ಅಂತಸ್ತು, ಬಿಗುಮಾನ ತೋರ್ಪಡಿಕೆ ಬದಿಗಿಡಿ. ಐದೂ ಬೆರಳು ಹೇಗೆ ಸಮನಾಗಿ ಇರುವುದಿಲ್ಲವೋ, ಹಾಗೆಯೇ ಪ್ರತಿ ವ್ಯಕ್ತಿಯ ಗುಣಗಳಲ್ಲಿ ವ್ಯತ್ಯಾಸಗಳಿರುತ್ತವೆ. ಹೀಗಿದ್ದಾಗ ವ್ಯಕ್ತ–ವ್ಯಕ್ತಿ ನಡುವೆ ಮನಸ್ತಾಪಗಳಾಗುವುದು ಸಹಜ. ಇಂಥ ಸಮಯದಲ್ಲಿ ನೀವು ಅವರೊಂದಿಗೆ ಮತ್ತಷ್ಟು ವೈಮನಸ್ಸು ಬೆಳೆಸಲು ಹೋಗದೆ, ನೀವೇ ಸೋತು ಬಿಡಿ. ಸೋಲಿನಲ್ಲೂ ಗೆಲುವು ಇದೆ ಎಂಬುದು ಮರೆಯದಿರಿ. ಸೋಲು ಕ್ಷಣಿಕವಾದರೂ ಅದರಿಂದ ಭವಿಷ್ಯದಲ್ಲಿ ಸಿಗುವ ಗೆಲುವು ಬಹಳ ದೊಡ್ಡದು. ಎಲ್ಲರೂ ಸಾಮರಸ್ಯದಿಂದ ಮಾತ್ರವೇ ದೇಶ ಮುನ್ನಡೆಯಲು, ಅಭಿವೃದ್ಧಿಯತ್ತ ವೇಗವಾಗಿ ಸಾಗಲು ಸಾಧ್ಯ. ನಾವು ಸಾವಿರಾರು ಕಿಲೋಮೀಟರ್ ದೂರವಿರುವ ಚಂದ್ರನನ್ನು ಮುಟ್ಟಿಬಂದಿದ್ದೇವೆ. ಆದರೆ, ನಮ್ಮವರ, ನೆರೆಹೊರೆಯವರ, ಸ್ನೇಹಿತರ, ಬಂಧುಗಳ ಮನ ಮುಟ್ಟುವಲ್ಲಿ ಹಿಂದುಳಿದಿದ್ದೇವೆ. ನಿಜವಾಗಿಯೂ ದೇಶಸೇವೆ ಮಾಡಬೇಕೆಂದು ಅಭಿಲಾಷೆ ಹೊಂದಿದ್ದರೆ ಈರ್ಷ್ಯೆ ಬಿಟ್ಟು, ಸಣ್ಣತನವನ್ನು ಬಲಿಕೊಟ್ಟು, ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಿ, ಎಲ್ಲರೊಂದಿಗೆ ಬೆರೆತರೆ ದೇಶ ತಂತಾನೇ ಅಭಿವೃದ್ಧಿಯ ನಾಗಾಲೋಟದಲ್ಲಿ ಸಾಗುತ್ತದೆ. ಇದೂ ಕೂಡಾ ದೇಶಸೇವೆ ಮಾಡಲು ಇರುವ ಒಂದು ಭಾಗ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**

ಇ–ಮೇಲ್:hampitimes@gmail.com

### ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

# ಹಂಪಿ ಪ್ರದೇಶದ ಮಠಗಳು

**"ಕೃತಯುಗದಲ್ಲಿ ಕೇತಾರವೆಂಬ ಮೂಲ ಸ್ಥಾನ**
**ತೇತ್ರಾಯುಗದಲ್ಲಿ ವಾರಣಾಸಿ ಎಂಬ ಮೂಲಸ್ಥಾನ**
**ದ್ವಾಪರದಲ್ಲಿ ವಿರೂಪಾಕ್ಷನೆಂಬ ಮೂಲ ಸ್ಥಾನ**
**ಕಲಿಯುಗದಲ್ಲಿ ಪರ್ವತವೆಂಬ ಮೂಲ ಸ್ಥಾನ**
**ನಾನು ಸ್ಥಾನಂಗಳ ಮುಟ್ಟಿದ ಜಂಗಮವೇ**
**ಲಿಂಗವೆಂದು ನಂಬಿದ ಕೂಡಲಸಂಗಮದೇವ."**



ಹಂಪಿ ಒಳನೋಟ



**ಎಂ.ಎಂ.ಶಿವಪ್ರಕಾಶ**
**ಹೊಸಪೇಟೆ**

ಬಸವಣ್ಣನವರ ಈ ವಚನದ ಪ್ರಕಾರ ಹಂಪಿ ವಿರೂಪಾಕ್ಷ ಎಂಬ ಹೆಸರಿನಿಂದಲೇ ಪ್ರಸಿದ್ಧವಾಗಿತ್ತು. ಇದನ್ನು ವಿರೂಪಾಕ್ಷ ಸೀಮೆ, ಪಂಪಾಪುರ ಎಂದು ಕರೆಯಲಾಗಿದೆ. ಹರಿಹರ ಮಹಾಕವಿ ತನ್ನ ಕಾವ್ಯ ಒಂದರಲ್ಲಿ ಹಂಪಿ ವಾರಣಾಸಿಯಷ್ಟೇ ಪ್ರಸಿದ್ಧಿಯನ್ನು ಪಡೆದಿತ್ತು ಎಂದು ವರ್ಣಿಸಿದ್ದಾನೆ. ಪೌರಾಣಿಕವಾಗಿ ಧಾರ್ಮಿಕವಾಗಿ ಸಾಂಸ್ಕೃತಿಕವಾಗಿ ಹಂಪಿಯು ತನ್ನದೇ ಆದ ಚರಿತ್ರೆಯನ್ನು ಹೊಂದಿದೆ. ಪ್ರಾಕೃತಿಕ ಸೌಂದರ್ಯದ ನದಿಯ ಬೆಟ್ಟ ಬಂಡೆ ಗುಡ್ಡಗಳ ನಡುವೆ ಹಂಪಿಯು ಪರಂಪರಾಗತವಾಗಿ ಬೆಳೆದುಕೊಂಡು ಬಂದಿದೆ. ಈ ಪ್ರಾಕೃತಿಕ ಬಂಡೆ ಬೆಟ್ಟಗಳಲ್ಲಿ ಆದಿಮಾನವ ನೆಲೆ ನಿಂತ ಚರಿತ್ರೆ ಈ ಬೆಟ್ಟ ಗುಡ್ಡಗಳಿಗಿದೆ. ಎಂದುಅಲ್ಲಿಂದ ಮುಂದೆ ವಿಜಯನಗರದ ಕಾಲಘಟ್ಟದಲ್ಲಿ ಅನೇಕ ಕವಿಗಳು ಆಚಾರ್ಯರು ವಿರಕ್ತರು ಅನುಭಾವಿಗಳು ಹಂಪಿಯ ಈ ಗುಹೆ ಮಠ ಮಂಟಪಗಳಲ್ಲಿ ನೆಲೆ ನಿಂತು ಕಟ್ಟಿ ಕೊಟ್ಟ ಸಾಹಿತ್ಯ, ವಚನ ಸಾಹಿತ್ಯ ಅತ್ಯಂತ ಮಹತ್ವದ್ದಾಗಿವೆ.

ರಾಜಪ್ರಭುತ್ವದಲ್ಲಿ ಅರಮನೆ ಮತ್ತು ಗುರು ಮನೆಗಳಿಗೆ ಮಹತ್ವದ ಸ್ಥಾನವಿತ್ತು. ಗುರು ಮನೆಗಳಿಗೆ ರಾಜರ ಆಶ್ರಯವಿತ್ತು, ರಾಜರಿಗೆ ಗುರುಗಳ ಮಾರ್ಗದರ್ಶನ ಮತ್ತು ಆಶೀರ್ವಾದ ಇರುತ್ತಿತ್ತು ಹೀಗಾಗಿ ಅರಮನೆ ಮತ್ತು ಗುರು ಮನೆಗಳ ಸಂಬಂಧದಲ್ಲಿ ಕನ್ನಡ ಸಾಹಿತ್ಯ ಬೆಳೆದು ಬಂದಿದೆ. ಕೆಲ ರಾಜರು ಆಸಕ್ತಿಯಿಂದ ಸಾಹಿತ್ಯಕ್ಕೆ ಪ್ರೋತ್ಸಾಹ ನೀಡಿದ್ದಲ್ಲದೆ ತಾವೇ ಸ್ವತಃ ಸಾಹಿತ್ಯ ರಚನೆ ಮಾಡಿ ಬೆಂಬಲಿಸಿದವರು ಇದ್ದಾರೆ. ಈ ಸಾಲಿನಲ್ಲಿ ವಿಜಯನಗರ ಸಾಮ್ರಾಜ್ಯದ ಆಡಳಿತದ ಕಾಲಘಟ್ಟದಲ್ಲಿ ಕಲೆ ಸಾಹಿತ್ಯ ಸಂಗೀತ ಕ್ರೀಡೆ ವಾಸ್ತುಶಿಲ್ಪಕ್ಕೆ ಮಹತ್ತರವಾದ ಸ್ಥಾನವಿತ್ತು. ವಿಶೇಷವಾಗಿ ಪ್ರೌಢದೇವರಾಯ ಮತ್ತು ಕೃಷ್ಣದೇವರಾಯರ ಕಾಲದಲ್ಲಿ ಕನ್ನಡ ತೆಲುಗು ಸಾಹಿತ್ಯಕ್ಕೆ ಅತ್ಯಂತ ಮಹತ್ವದ ಸ್ಥಾನವಿತ್ತು. ಪ್ರೌಢದೇವರಾಯನ ಕಾಲದಲ್ಲಿ ಧಾರ್ಮಿಕವಾಗಿ, ಸಾಹಿತಿಕವಾಗಿ, ಕವಿಗಳಿಗೆ ಪಂಡಿತರಿಗೆ ಶರಣರಿಗೆ ಕಲಾವಿದರಿಗೆ ರಾಜಾಶ್ರಯ ದೊರೆತಿತ್ತು. ನಾಡಿನ ವಿವಿಧ ಪ್ರದೇಶಗಳ ಶರಣರು ಹಂಪಿಗೆ ಬಂದು ನೆಲೆ ನಿಂತರು .101 ಶರಣರು ಹಂಪಿಗೆ ಬಂದು ವಚನ ಸಾಹಿತ್ಯದ ಸಂಗ್ರಹ ಮರುಜೋಡಣೆನೆ

ವಿವರಣೆ ಕಾರ್ಯವನ್ನು ಮಾಡಿದ್ದರು. ಹಲವಾರು ಕವಿಗಳು ನೂರಾರು ಗ್ರಂಥಗಳ ರಚನೆ ಮಾಡಿದ್ದಾರೆ. ಹಂಪಿಯ ಬಂಡೆ ಬೆಟ್ಟಗಳ ನಡುವೆ ಗವಿ ಮಂಟಪಗಳಲ್ಲಿ ಮಠಗಳಲ್ಲಿ ಈ ಸಾಹಿತ್ಯದ ರಚನೆ ಮಾಡಿದ್ದಾರೆ. ಹಂಪಿಯ ಪರಿಸರದ ಈ ಮಠಮಾನ್ಯಗಳ ಕುರಿತ ಒಂದಷ್ಟು ಮಾಹಿತಿ ಇಲ್ಲಿದೆ.

ಕನ್ನಡ ನಾಡಿನ ಧಾರ್ಮಿಕ ಶೈಕ್ಷಣಿಕ ಸಾಂಸ್ಕೃತಿಕ ಚರಿತ್ರೆಯಲ್ಲಿ ಮಠಮಾನ್ಯಗಳಿಗೆ ಮಹತ್ತರ ಸ್ಥಾನವಿದೆ. ಅನ್ನ, ಅಕ್ಷರ, ಆಶ್ರಯಗಳನ್ನು ನೀಡಿ ಸಾಮಾಜಿಕ ಕ್ರಾಂತಿಯನ್ನೇ ಮಾಡಿ ಎಂದುವೆ ಮಠಗಳು. ಇಷ್ಟೇ ಅಲ್ಲ ಪ್ರತಿಯೊಂದು ಮಠವು ಕನ್ನಡ ಸಾಹಿತ್ಯ ವಚನ ಸಾಹಿತ್ಯ ಅನುಭಾವ ಸಾಹಿತ್ಯ ಹೀಗೆ ಹಲವಾರು ಸಾಹಿತ್ಯದ ಪ್ರಕಾರಗಳನ್ನು ಉಳಿಸಿ ಬೆಳೆಸಿಕೊಂಡು ಬಂದಿವೆ. ಇದೇ ರೀತಿ ಹಿಂದೆ ಹಂಪಿಯ ಪರಿಸರದಲ್ಲಿಯೂ ಹಲವಾರು ಮಠಗಳು ಇಂತಹ ಕಾರ್ಯಗಳನ್ನು ನಿರ್ವಹಿಸಿವೆ.ವಿಶೇಷವಾಗಿ ಪ್ರೌಢದೇವರಾಯನ ಆಳ್ವಿಕೆಯಲ್ಲಿ ಧರ್ಮ ಸಾಹಿತ್ಯದ ಕಾರ್ಯಗಳ ಕೇಂದ್ರವಾಗಿತ್ತು. ಹಂಪಿಯಲ್ಲಿ ಹತ್ತಾರು ಮಠಗಳಿದ್ದು ಅವುಗಳು ಹಂಪಿಯ ವಿರೂಪಾಕ್ಷ ಬಜಾರದ ಮಂಟಪಗಳಲ್ಲಿ ಇದ್ದವು ಎನ್ನುವುದನ್ನು ಸಂಶೋಧಕರು ಗುರುತಿಸಿದ್ದಾರೆ.

## ಹಂಪಿಯ ಮಠಗಳು

ಹಂಪಿಯು ಮೂಲ ಶೈವ ಪರಂಪರೆಯಿಂದ ಬಂದದ್ದು .ವಿರೂಪಾಕ್ಷ ದೇವಸ್ಥಾನವನ್ನು ವಿರೂಪಾಕ್ಷ ಮಠವೆಂದು ಸಹ ಕರೆಯಲಾಗಿದೆ. ಶೈವ ಮಠಗಳ ಜೊತೆಗೆ ವೀರಶೈವ ಮಠಗಳ ಪರಂಪರೆ ನಂತರ ವೈಷ್ಣವ ಪರಂಪರೆಯನ್ನು ಹಂಪಿಯ ನೆಲದಲ್ಲಿ ಕಾಣಬಹುದು. ಹಂಪಿ ಪರಿಸರವು ಹಲವಾರು ವಿಶೇಷಗಳನ್ನು ವೈಶಿಷ್ಟ್ಯಗಳನ್ನು ಹೊಂದಿದೆ. ಇಲ್ಲಿಯ ವಿರೂಪಾಕ್ಷ ಬಜಾರ,ಹೇಮಕೂಟ, ಮಾತಂಗ ,ಪಂಪ ಸರೋವರ ಮಾಲ್ಯವಂತ ಹೀಗೆ ಹಲವಾರು ಪ್ರದೇಶಗಳಲ್ಲಿ ಮಠಗಳು ಗವಿಗಳ ಇರುವುವಿಕೆಯನ್ನು ವಿದ್ವಾಂಸರು ಗುರುತಿಸಿದ್ದಾರೆ. ಇಲ್ಲಿಯ ಪ್ರದೇಶಗಳಲ್ಲಿ ಹಲವಾರು ಮಠಗಳು ಇದ್ದು ವಚನ ಸಾಹಿತ್ಯ ಮತ್ತು ಕನ್ನಡ ಸಾಹಿತ್ಯವನ್ನು ರಚನೆ ಮಾಡಿದ ಬಗ್ಗೆ ಶಾಸನ ಸಹಿತ ಆಧಾರಗಳು, ಎಂದು ಕೃತಿಗಳು ಲಭ್ಯವಾಗಿವೆ. ಈ ಪ್ರದೇಶದ ಪ್ರಮುಖ ಮಠಗಳೆಂದು ಕೆಲವುಗಳನ್ನು ಗುರುತಿಸಲಾಗಿದೆ ಅವುಗಳೆಂದರೆ ಕರಿಸಿದ್ದೇಶ್ವರ ಮಠ ,ಪ್ರಭುದೇವರ ಕಲ್ಲು ಮಠ, ಕೊಟ್ಟೂರು ಸ್ವಾಮಿ ಮಠ, ಹಿರೇಮಠ, ಸಾವಿರ ದೇವರ ಮಠ, ಕರಸ್ಥಳದ ವೀರಣ್ಣ ನೊಡೆಯನ ಮಠ, ನಾಗಲಿಂಗ ಸ್ವಾಮಿ ಮಠ. ಹೇಮಕೂಟ, ಗವಿಮಠ ಇವುಗಳಲ್ಲದೆ ಮಹಂತಿನ ಮಠ, ಕುರುಗೋಡು ನೀಲಮ್ಮನ ಮಠ,ಹಾನವಳ ಮಠ, ನಿರಾಸೆ ಮಠ,ಬಸವರಾಜ ದೇವರ ಮಠ ,ಶ್ರೀಧರ ಮಠ, ಪರಮೇಶ್ವರನ ಮಠ, ತ್ರಯಂಬನಾಥ ಸ್ವಾಮಿ ಮಠ, ಸದಾ ಶಿವಯೋಗಿ ಮಠ, ಕಲ್ಲು ಮಠ ಹೀಗೆ ಹತ್ತಾರು ಮಠಗಳಿದ್ದವು.

ಈ ಮಠಗಳಲ್ಲಿ ಪ್ರಮುಖವಾಗಿ ಶ್ರೀ ಕರಿಸಿದ್ದೇಶ್ವರ ಮಠ ,ಸಾವಿರ ದೇವರ ಮಠ, ಕೊಟ್ಟೂರು ಸ್ವಾಮಿ ಮಠ,ಬೂಸನೂರು ಮಠ, ಕಲ್ಲು ಮಠ,ನೀಲಮ್ಮನ ಮಠ, ಹುಲಿ ಮಠ ಈ ಮಠಗಳು ವಿರೂಪಾಕ್ಷ ದೇವಸ್ಥಾನದ ಎದುರು ಸಾಲುಮಂಟಪಗಳಲ್ಲಿ ಇದ್ದವು ಎನ್ನುವುದನ್ನು ಅಧ್ಯಯನ ಮತ್ತು ಸಂಶೋಧನೆಯಿಂದ ಡಾ. ಸಿಟಿಎಂ ಕೊಟ್ರಯ್ಯ ಅವರು ಗುರುತಿಸಿದ್ದಾರೆ. ಎಲ್ಲ ಮಠಗಳು ವೀರಶೈವ ಆಚಾರ್ಯರಿಗೆ ಸಂಬಂಧಿಸಿದವುಗಳೆಂದು ಗುರುತಿಸಲಾಗಿದೆ

## ಕಾಶಿ ಮಠ

ಹಿಂದೆ ಹಂಪೆಯ ವಿರೂಪಾಕ್ಷ ಬಜಾರದ ಬಲಗಡೆಯ ಭಾಗದ ಸಾಲುಮಂಟಪದಲ್ಲಿ ಇದು ಇದ್ದಿದ್ದನ್ನು ಗುರುತಿಸಿದ್ದಾರೆ.ಇದು ಹಂಪಿಯಲ್ಲಿ ಸ್ಥಾಪಿತವಾದ ಕಾಶಿ ಮಠ ಜ್ಞಾನಸಿಂಹಾಸನದ ಪೀಠದ ಒಂದು ಶಾಖೆಯಾಗಿ ಇರಬೇಕೆಂದು ಊಹಿಸಲಾಗಿದೆ . ಸಿಟಿಎಂ ಕೊಟ್ರಯ್ಯಅವರ ಪ್ರಕಾರ ಹಂಪಿಯಲ್ಲಿ ವೀರಶೈವ ಸಿಂಹಾಸನ ಪೀಠ ಎಂಬ ಬಹಳ ಮುಖ್ಯವಾದ ಮಠವಾಗಿದ್ದು,ಅದು ಐದು ಶಾಖಾಮಠಗಳನ್ನು ಹೊಂದಿತ್ತೆಂದು, ಇದರಭಾಗವಾಗಿ ಕಾಶಿ ಮಠ ಅಥವಾ ಕರಿಸಿದ್ದೇಶ್ವರ ಮಠವೆಂದು ವಿಶ್ಲೇಷಿಸಿದ್ದಾರೆ. ಇದು ಇಂದು ಹಂಪಿಯ ಪೂರ್ವಭಾಗದಲ್ಲಿರುವ ಬುಕ್ಕಸಾಗರದಲ್ಲಿದೆ.

## ಕೊಟ್ಟೂರ್ ಸ್ವಾಮಿ ಮಠ

ಈ ಮಠವು ವಿರುಪಾಕ್ಷ ಗುಡಿಯ ದೇವಾಲಯದ ಎಡ ಭಾಗದಲ್ಲಿ ಹಾಗೂ ತುಂಗಭದ್ರ ನದಿಯ ದಂಡೆಯ ಮೇಲೆ ಉತ್ತರಾಭಿಮುಖವಾಗಿ ಇದೆ.ಈ ಮಠವು ಇಂದಿಗೂ ಅಸ್ತಿತ್ವದಲ್ಲಿ ಇದೆ. ಕ್ರಿಸ್ತಶಕ 1521 ರಲ್ಲಿ ತೋಂಟದ ಸಿದ್ದಲಿಂಗ ಯತಿಗಳು ಹಂಪಿಗೆ ಬಂದಾಗ ಈ ಕೊಟ್ಟೂರು ಸ್ವಾಮಿ ಮಠದಲ್ಲಿ ಅನುಷ್ಠಾನ ಮಾಡಿದ್ದಾರೆ ಎಂಬ ಪ್ರತೀತಿಯಿದೆ. 1518 ರಿಂದ ಈ ಮಠದ ಗುರುಪರಂಪರೆ ಪ್ರಾರಂಭಗೊಂಡು ಇವತ್ತಿನವರೆಗೂ ಇದು ನಡೆದುಕೊಂಡು ಬಂದಿದೆ.

ಈವರೆಗೆ 21 ಗುರು ಪರಂಪರೆ ಸ್ವಾಮೀಜಿಗಳು ಈ ಮಠದ ಪೀಠವನ್ನು ಅಲಂಕರಿಸಿದ್ದಾರೆ. ಹೊಸಪೇಟೆಯಲ್ಲಿಯು ಕೊಟ್ಟೂರು ಸ್ವಾಮಿ ಮಠವಿದ್ದು ಈ ಮಠದ ಸ್ವಾಮೀಜಿಗಳೇ ಹಂಪಿಯ ಕೊಟ್ಟೂರ್ ಸ್ವಾಮಿ ಮಠದ ಸ್ವಾಮಿಗಳು ಆಗಿರುತ್ತಾರೆ. 1972 ರಿಂದ ಶ್ರೀ ಮ ನಿ ಪ್ರಸಂಗನ ಮಹಾಸ್ವಾಮಿಗಳು ಸಂಗನಬಸವ ಮಹಾಸ್ವಾಮಿಗಳು ಮಠದ ಪರಂಪರೆಯನ್ನು ಅತ್ಯಂತ ಸಮರ್ಪಕವಾಗಿ ನಿರ್ವಹಿಸಿಕೊಂಡು ಬಂದಿದ್ದವರು. ಹೊಸಪೇಟೆ ಕೊಟ್ಟೂರು ಸ್ವಾಮಿ ಮಠದಲ್ಲಿ ಮಹಾಕವಿ ಹರಿಹರ ಸ್ಮಾರಕ ಸಂಶೋಧನಾ ಕೇಂದ್ರವನ್ನು ಪ್ರಾರಂಭಿಸಿ ಅದರ ಮೂಲಕ ಸಾಹಿತ್ಯವನ್ನು ಪ್ರಕಟಿಸುತ್ತಾ ಬಂದಿದ್ದಾರೆ. ಅನೇಕ ಧಾರ್ಮಿಕ ಶೈಕ್ಷಣಿಕ, ಸಾಮಾಜಿಕ ಕಾರ್ಯಗಳನ್ನು ಅತ್ಯಂತ ಸಮರ್ಥವಾಗಿ ಪರಮ ಪೂಜ್ಯರು ನಿರ್ವಹಿಸಿಕೊಂಡು ಬಂದಿದ್ದವರು. ಅಲ್ಲದೆ ಹಂಪಿಯಲ್ಲಿ ಪಾವಿತ್ರ್ಯವನ್ನು ಕಾಪಾಡುವ ಸಂಬಂಧ ಹಂಪಿಯಲ್ಲಿ ಹೋರಾಟವನ್ನು ಸಂಘಟಿಸಿ ಹಂಪೆಯಿಂದ ಹೊಸಪೇಟೆಯವರೆಗೂ ಪಾದಯಾತ್ರೆಯನ್ನು ಮಾಡಿ ಸರ್ಕಾರದ ಗಮನವನ್ನು ಸಹ ಸೆಳೆದಿದ್ದವರು. ಇವರ ಪಟ್ಟಾಧಿಕಾರದ ಸುವರ್ಣ ಮಹೋತ್ಸವವನ್ನು ಇದೆ 20 ರಿಂದ ಆಚರಿಸಲಾಗುತ್ತಿದೆ. 15ನೇ ಶತಮಾನದಿಂದ ಇಲ್ಲಿಯವರೆಗೂ ತನ್ನ ಪರಂಪರೆಯನ್ನು ಉಳಿಸಿ ಬೆಳೆಸಿಕೊಂಡು ಬಂದಿರುವುದು ಅತ್ಯಂತ ಸಂತೋಷದ ವಿಚಾರವಾಗಿದೆ. ಈ ಮಠಕ್ಕೆ ಹಲವಾರು ಶಾಖಾ ಮಠಗಳಿವೆ.

## ಹೇಮಕೂಟ ಮಠ

ಪಾರ್ವತಿ ತಪಸ್ಸು ಮಾಡಿದಾಗ ಶಿವನು ಪ್ರತ್ಯಕ್ಷನಾದದ್ದು ಹೇಮಕೂಟದಲ್ಲಿ ಹೀಗಾಗಿ ಹೇಮಕೂಟಕ್ಕೆ ಅತ್ಯಂತ ಪ್ರಾಚೀನವಾದ ಚರಿತ್ರೆಯಿದ್ದು ಅತ್ಯಂತ ಪ್ರಾಚೀನ ಸ್ಥಳವೆಂದು ಕರೆಯಲ್ಪಟ್ಟಿದೆ. ವಿರೂಪಾಕ್ಷ ನನ್ನು ಹರಿಹರ ಮಹಾಕವಿ ಹೇಮಕೂಟ ಸಿಂಹಾಸನಧೀಶ್ವರ ಎಂದು ಕರೆದಿದ್ದಾನೆ. ಶಿವ ಮತ್ತು ಪಾರ್ವತಿಯರ ಕಲ್ಯಾಣ ನಡೆದ ಸ್ಥಳ ಇದೆ ಎಂದು ಪ್ರಸಿದ್ಧಿಯಾಗಿದೆ. ವಿರೂಪಾಕ್ಷನ ಮೂಲ ಸ್ಥಳ ಹೇಮಕೂಟವೇ ಆಗಿದೆ . ಹೀಗಾಗಿ ಹೇಮಕೂಟಕ್ಕೆ ಅತ್ಯಂತ ಮಹತ್ವದ ಸ್ಥಾನವಿದೆ.

## ಇತರೆ ಮಠಗಳು

ವಿರೂಪಾಕ್ಷ ಬಜಾರದ ಮಂಟಪಗಳ ಸಾಲುಗಳಲ್ಲಿ ಮಹಾಂತಿನ ಮಠ, ಕುರುಗೋಡು ನೀಲಮ್ಮನ ಮಠ ,ನಿರಾಸೆ ಮಠ ,ಬಸವರಾಜ್ ದೇವರ ಮಠ ,ಸಾವಿರ ದೇವರ ಮಠ ,ಕಲ್ಲು ಮಠ ಹೀಗೆ ಕೆಲವು ಮಠಗಳು ಇದ್ದ ಬಗ್ಗೆ ಗುರುತಿಸಲಾಗಿದೆ.

## ಹಿರೇಮಠ

ಹಂಪಿಯಲ್ಲಿರುವ ಹಿರೇಮಠಕ್ಕೆ ವಿಶೇಷವಾದ ಮಹತ್ವವಿದೆ ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ವಿಜಯನಗರದ ಒಂದು ಭಾಗವಾಗಿದ್ದ ಕೃಷ್ಣಾಪುರದ ನಗರದಲ್ಲಿ ಈ ಹಿರೇಮಠವನ್ನು ಈಗಲೂ ಕಾಣಬಹುದಾಗಿದೆ.600 ಸ್ತಂಭಗಳಿಂದ ಕೂಡಿರುವ ಈ ಮಂಟಪವು ಈಗ ಶೀತಾಲಾವಸ್ಥೆಯಲ್ಲಿದೆ. ಈಗ ಪೂಜೆಗೊಳ್ಳುತ್ತಿರುವ ಉದ್ಯಾನ ವೀರಭದ್ರ ಸ್ವಾಮಿ ದೇವಸ್ಥಾನವು ಈ ಹಿರೇಮಠದ ಭಾಗವಾಗಿತ್ತೆಂದು ಸಂಶೋಧಕರು ಗುರುತಿಸಿದ್ದಾರೆ.

## ಪ್ರಭುದೇವರ ಕಲ್ಲು ಮಠ

ಲಿಂಗ ಲೀಲಾ ವಿಲಾಸ ಚಾರಿತ್ರದ ಕರ್ತೃ ಪ್ರಭುದೇವರ ಕಲ್ಮಠ ಇದಾಗಿದೆ. ಹಂಪಿಯ ವೀರಶೈವ ಮಠಗಳಲ್ಲಿ ಇದು ಅತ್ಯಂತ ಪ್ರಭಾವಿ ಮಠ ಎಂದು ಗುರುತಿಸಿದ್ದಾರೆ. ಈ ಮಠವು ಪ್ರೌಢದೇವರಾಯನ ಕಾಲದಲ್ಲಿ ಅಂದರೆ 15ನೇ ಶತಮಾನದಲ್ಲಿ ಅಸ್ತಿತ್ವದಲ್ಲಿತ್ತು. ಈ ಮಠದಲ್ಲಿಯೇ ಕುಳಿತು ಕಲ್ಲು ಮಠದ ಪ್ರಭುದೇವ ತನ್ನ ಲಿಂಗ ಲೀಲಾ ವಿಲಾಸ ಚರಿತ್ರೆ ಮತ್ತು ಪ್ರಭುದೇವರ ಮಂತ್ರ ಗೌಪ್ಯದ ಟೀಕೆ ಎಂಬ ಗ್ರಂಥವನ್ನು ರಚಿಸಿದ್ದಾನೆ ಎನ್ನಲಾಗಿದೆ ಇಂತಹ ಮಹತ್ವದ ಭವಿಷ್ಯ ವಿಜಯನಗರದ ಪತನದ ನಂತರ ಕಂಪ್ಲಿಗೆ ಸ್ಥಳಾಂತರ ಗೊಂಡಿರಬೇಕು. ಕಂಪ್ಲಿಯಲ್ಲಿ ಈಗಲೂ ಕಂಪ್ಲಿಯ ಕಲ್ಮಠವೆಂದು ಅಸ್ತಿತ್ವದಲ್ಲಿದೆ.

## ಕರಸ್ಥಲದ ವೀರಣ್ಣೊಡೆಯನಮಠ

ವಿಜಯನಗರದ ಪ್ರಸಿದ್ಧ ದೊರೆ ಪ್ರೌಢದೇವರಾಯನಿಗೆ ದೀಕ್ಷೆ ನೀಡಿದ ಕರಸ್ಥಳದ ವೀರಣ್ಣೊಡೆಯನ ಹೆಸರಿನಲ್ಲಿ ಈ ಮಠವು ನಿರ್ಮಾಣಗೊಂಡಿತ್ತು. ಇದು ತಳವಾರ ಘಟ್ಟ ರಸ್ತೆಯಲ್ಲಿ ಬೆಟ್ಟದ ಕೆಳಗಡೆ ಕಾಣಿಸುತ್ತದೆ .ವೀರಶೈವ ಅನುಭಾವಿ ಶರಣ ಕರಸ್ಥಲದ ವೀರಣೊಡೆಯನ ಮಠವೆಂದು ಖ್ಯಾತ ಸಂಶೋಧಕರು ಕನ್ನಡ ವಿಶ್ವವಿದ್ಯಾಲಯದ ಈಗಿನ ಕುಲಪತಿಗಳಾದ ಡಾ.ಡಿ.ವಿ. ಪರಮಶಿವಮೂರ್ತಿಯವರು ಇದನ್ನು ಈ ಹಿಂದೆ ಸಂಶೋಧಿಸಿದ್ದಾರೆ.

## ಚಾಮರಸನ ಮಠ

ಹಂಪಿಯ ನೂರೊಂದು ವಿರಕ್ತರಲ್ಲಿ ಒಬ್ಬನಾಗಿರುವ ಚಾಮರಸ ಉದ್ಯಾನ ವೀರಭದ್ರ ದೇವಾಲಯದಿಂದ ಕಮಲಾಪುರಕ್ಕೆ ಹೋಗುವ ರಸ್ತೆಯ ಹಂಪಾದೇವಿ ದಿಡ್ಡಿಯ ಬಳಿ ಚಾಮರಸನ ಗವಿ ಅಥವಾ ಮಠವನ್ನು ಖ್ಯಾತ ಸಂಶೋಧಕರಾದ ಚಿದಾನಂದಮೂರ್ತಿ ಮೂರ್ತಿ ಅವರು ಗುರುತಿಸಿದ್ದಾರೆ. ಪ್ರಭುಲಿಂಗಲೀಲೆಯ ಕರ್ತೃ ಆಗಿರುವ ಚಾಮರಸ ಕ್ರಿಸ್ತಶಕ 1434ರಲ್ಲಿ ಹಂಪಿಯ ನಿವಾಸಿಯಾಗಿ ಈ ಗುಹೆ ಅಥವಾ ಮಠದಲ್ಲಿ ವಾಸವಾಗಿದ್ದನೆಂಬುದನ್ನು ವಿಶ್ಲೇಷಿಸಲಾಗಿದೆ.

ಪ್ರೌಢದೇವರಾಯನ ಕಾಲದಲ್ಲಿ ಹಂಪಿಯು ಧಾರ್ಮಿಕ ಸಾಹಿತ್ಯಿಕ ಕೇಂದ್ರವಾಗಿ ಮಾರ್ಪಟ್ಟಿತ್ತು. ಕವಿ ಸಾಹಿತಿಗಳಿಗೆ ರಾಜಶ್ರಯವನ್ನು ನೀಡಿ ಸಾಹಿತ್ಯವನ್ನು ಪೋಷಿಸಿದ. ಇವನ ಕಾಲದಲ್ಲಿ ವೀರಶೈವ ಧರ್ಮದ ಸಾಹಿತ್ಯವು ಪೂರ್ಣ ಪ್ರಮಾಣದಲ್ಲಿ ಸ್ಥಾನ ಪಡೆದಿತ್ತು. ನೂರೊಂದು ವಿರಕ್ತರು ಹಂಪಿಯಲ್ಲಿ ಇದ್ದು ವಚನಗಳ ಸಂಗ್ರಹ, ವ್ಯಾಖ್ಯಾನ ,ಟೀಕುಗಳನ್ನು ಬರೆದಿದ್ದಾರೆ.ಹೀಗಾಗಿ ಪ್ರೌಢದೇವರಾಯನ ಕಾಲವನ್ನು ನೂರೊಂದು ವಿರಕ್ತರ ಕಾಲ, ವೀರಶೈವ ಧಾರ್ಮಿಕ ಸಾಹಿತ್ಯಿಕ ಪುನರುತ್ಥಾನ ಯುಗ ಎಂದು ಕರೆಯಲಾಗಿದೆ.ಅಲ್ಲದೆ ವೀರಶೈವ ಸಮುದ್ಧರಣಯುಗ ವೆಂದು ಸಹ ಕರೆಯಲಾಗಿದೆ. ಪ್ರೌಢದೇವರಾಯನ ಕಾಲದಲ್ಲಿ ಹಂಪಿಯು ಹಲವಾರು ಮಠಗಳ ಕೇಂದ್ರವಾಗಿತ್ತು. ಇವುಗಳ ಮೂಲಕ ಧಾರ್ಮಿಕ –ಸಾಹಿತ್ಯಿಕ ಕಾರ್ಯಗಳು ನಡೆದು ನಾಡಿನ ಸಾಹಿತ್ಯ ಸಾಂಸ್ಕೃತಿಕ ಚರಿತ್ರೆಯಲ್ಲಿ ಅತ್ಯಂತ ಮಹತ್ವದ ಕಾಲಘಟ್ಟ ವೆಂದು ದಾಖಲಾಗಿದೆ.ಶೈವಕ್ಷೇತ್ರವಾಗಿದ್ದ ಹಂಪಿ ನಂತರ ಶೈವ ಮತ್ತು ವೀರಶೈವ ಸಂಗಮವಾಗಿ, ವೀರಶೈವದ ಕೇಂದ್ರವಾಗಿತ್ತು. ಪ್ರೌಢದೇವರಾಯ ವೀರಶೈವ ಧರ್ಮಕ್ಕೆ ನೀಡಿದ ಪ್ರೋತ್ಸಾಹಕ್ಕೆ ಅವನನ್ನು ವೀರಶೈವ ಆಗಮ ಸಾರಸಂಪನ್ನನೆಂದು ಕರೆದ ಬಗ್ಗೆ ಶಾಸನದಲ್ಲಿ ಉಲ್ಲೇಖವಿದೆ.ಹೀಗೆ ಹಂಪಿ ಮಠಗಳು ನೆಲವಾಗಿತ್ತು.





T.M.A.E.S.
RESIDENTIAL PU COLLEGE
SCIENCE - PCMB / PCMC
COMMERCE -EBAS / EBACs / BASCs
Call Now for more information:
9483510530, 6366437712

We are Good at
- Having dynamic and experience faculties
- Best Study Material
- Regular Mock Test & Assignments

Fecilities
- Separate Hostel Facility for Boys & Girls with hygienic food
- Mentoring System for holystic progress of Child
- Transport facility available

DAV Campus Sanklapur Ballari Road Hosapete-583201

In Collaboration with
Avanti
IIT-JEE | NEET | Foundation



## ಕವಿ ಮನಸು

### ರವಿಯೇ ಚೆಂಡು!



ಬೆಂಕಿಯುಗುಳುವ ವೇಗದಿಂದಲಿ
ಚೆಂಡನೆಸದನೆ ಎಸೆವವ
ಭಯವ ತೋರದೆ ಅದನು ಎದುರಿಸಿ
ಆಡುತಿರುವನು ದಾಂಡಿಗ

ತನ್ನ ನಿಗದಿತ ಜಾಗದಲ್ಲಿಯೆ
ನಿಂತು ಆಡುತಲಿರುವನು
ಪೂರ್ಣ ಪರಿಣಿತ ಆಟಗಾರನು
ಭಯವನೇತಕೆ ಪಡುವನು?

ಉರಿವ ಸೂರ್ಯನು ಮುಗಿಸಿ ದಿನಚರಿ
ಶರಧಿ ಕಡೆಗವ ಸಾಗುತ
ಹೊಳೆವ ಚೆಂಡಿನ ತರದಿ ಕಾಣುವ
ರವಿಯ ಚೆಲುವಿದು ಅದ್ಭುತ

ಮುಳುಗೊ ಸೂರ್ಯನ ಆಟಗಾರನು
ಚೆಂಡು ಎನ್ನುವ ತರದಲಿ
ಬೀಸಿ ದಾಂಡನು ಭ್ರಮೆಯ ತರಿಸುವ
ಸೆಳೆವ ಯತ್ನವು ಮನದಲಿ॥

। ಪೆರ್ಮುಖ ಸುಬ್ರಹ್ಮಣ್ಯ ಭಟ್

### ಮಕ್ಕಳು ಅರಸರಾಗಬೇಕೆ?

ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?

ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ ಚಾನಲ್
FREE!
hampitimes epaper
save your mobile space !
SCAN QR CODE TO JOIN FOLLOW
HAMPI TIMES
whatsapp channel

### ತುಂಗಭದ್ರಾ ನೀರಿನ ಮಟ್ಟ



| ಶನಿವಾರ : 18-11-2023 | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1600.87 ಅಡಿ |
| ಒಳ ಹರಿವು | 316 ಕ್ಯುಸೆಕ್ |
| ಹೊರ ಹರಿವು | 8716 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 22.667 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

| ಕಳೆದ ವರ್ಷ ಇದೇ ದಿನ | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1631.08 ಅಡಿ |
| ಒಳ ಹರಿವು | 3857 ಕ್ಯುಸೆಕ್ |
| ಹೊರ ಹರಿವು | 8536 ಕ್ಯುಸೆಕ್ |
| ಸಾಮರ್ಥ್ಯ | 98.180 ಟಿಎಂಸಿ |

# ಪದವಿಗೆ ಪಠ್ಯ ಬದುಕಿಗೆ ಪಠ್ಯೇತರ ಆಧಾರ

## ಪಠ್ಯಪುಸ್ತಕ ಪರಿಷ್ಕರಣ ಸಮಿತಿ ಸದಸ್ಯ ಅಜ್ಮೀರ್ ನಂದಾಪುರ ಹೇಳಿಕೆ। ಪಠ್ಯೇತರ ಸಾಹಿತ್ಯದ ಮಹತ್ವ ಕುರಿತು ವಿಶೇಷ ಉಪನ್ಯಾಸ

■ ಹಂಪಿ ಟೈಮ್ಸ್ ಕಂಪ್ಲಿ

ಇಲ್ಲಿನ ಎಸ್‌ಜಿವಿಎಸ್‌ಎಸ್ ಬಾಲಕಿಯರ ಸರ್ಕಾರಿ ಪಿಯೂ ಕಾಲೇಜಿನಲ್ಲಿ ಸ್ಥಳೀಯ ಸಾಹಿತ್ಯ ಸಿರಿ ಪ್ರತಿಷ್ಠಾನವು ಶನಿವಾರ ಹಮ್ಮಿಕೊಂಡಿದ್ದ ಸುವರ್ಣ ಕರ್ನಾಟಕ ರಾಜ್ಯೋತ್ಸವ ಸಮಾರಂಭ ಜರುಗಿತು.

ಗಂಗಾವತಿಯ ಪಠ್ಯಪುಸ್ತಕ ಪರಿಷ್ಕರಣ ಸಮಿತಿ ಸದಸ್ಯ ಅಜ್ಮೀರ್ ನಂದಾಪುರ 'ಪಠ್ಯೇತರ ಸಾಹಿತ್ಯದ ಮಹತ್ವ' ಕುರಿತು ವಿಶೇಷ ಉಪನ್ಯಾಸ ನೀಡಿ, ಏಕಾಗ್ರತೆಯಿಂದ ಓದಿದಲ್ಲಿ ಉನ್ನತ ಹುದ್ದೆಗಳಿಸಲು ಸಾಧ್ಯವಿದೆ. ಪದವಿವಂತರಾಗಬಹುದಾದರೂ ಜ್ಞಾನವಂತರು, ಪ್ರತಿಭಾವಂತರಾಗಲು ಪಠ್ಯೇತರ ಸಾಹಿತ್ಯ ಪ್ರಮುಖಪಾತ್ರವಹಿಸುತ್ತದೆ. ಸಾಹಿತ್ಯದ ಓದು ರಸ ನಿಮಿಷಗಳೊಂದಿಗೆ ಬದುಕುವ ಬದುಕನ್ನು ಕಟ್ಟಿಕೊಡುತ್ತದೆ. ವಿದ್ಯಾರ್ಥಿಗಳು ಮೊಬೈಲ್ ಮಾಯಾಲೋಕದಲ್ಲಿ ಮುಳುಗಬಾರದು. ಮೊಬೈಲ್ ಭವಿಷ್ಯವನ್ನು ಕಟ್ಟಿಕೊಳ್ಳುವ ಸಾಧನವನ್ನಾಗಿ ರೂಪಿಸಿಕೊಳ್ಳಬೇಕಿದೆ. ಧಾರವಾಹಿ ನೋಡುವುದು ಚಟವಾಗಿ ಪರಿಣಮಿಸಬಾರದು. ಬಹುಮುಖ ಪ್ರತಿಭೆಗೆ ಪಠ್ಯದೊಂದಿಗೆ ಪಠ್ಯೇತರ ಸಾಹಿತ್ಯದ ಗೀಳು ಅಗತ್ಯ. ಕರ್ನಾಟಕ ಏಕೀಕರಣದಲ್ಲಿ ಬಳ್ಳಾರಿ ಜಿಲ್ಲೆ ವಿಶೇಷ ಪಾತ್ರವಹಿಸಿದೆ ಎಂದರು.




ಕಂಪ್ಲಿಯ ಸಾಹಿತ್ಯ ಸಿರಿ ಪ್ರತಿಷ್ಠಾನ ಹಮ್ಮಿಕೊಂಡಿದ್ದ ಕರ್ನಾಟಕ ರಾಜ್ಯೋತ್ಸವ ಸಮಾರಂಭವನ್ನು ನಗರಾಭಿವೃದ್ಧಿ ಹೋರಾಟ ಸಮಿತಿ ಅಧ್ಯಕ್ಷ ಕೃಷ್ಣ ಎಸ್.ಪೋಳ್ ಉದ್ಘಾಟಿಸಿದರು.

ಕಂಪ್ಲಿ ನಗರಾಭಿವೃದ್ಧಿ ಹೋರಾಟ ಸಮಿತಿ ಅಧ್ಯಕ್ಷ ಕೃಷ್ಣ ಎಸ್.ಪೋಳ್ ಸಮಾರಂಭ ಉದ್ಘಾಟಿಸಿ ಮಾತನಾಡಿ, ಕನ್ನಡ ಭಾಷೆ ಪ್ರಾಚೀನವಾಗಿದ್ದು ಸಾವಿಲ್ಲದ ಭಾಷೆಯಾಗಿದೆ. ಕನ್ನಡ ಭಾಷೆಯನ್ನು ಬೆಳೆಸಿದಷ್ಟು ಬೆಳೆಯುತ್ತದೆ. ಬೆಳೆಸುವವರ ಜೀವನಕ್ಕೆ ಹೊಳಪು ನೀಡುತ್ತದೆ. ವಿದ್ಯಾರ್ಥಿಗಳಿಗೆ ಭಾಷೆಯ ಚೌಕಟ್ಟು ಇರಬಾರದು. ಯಾವುದೇ ಮಾಧ್ಯಮದಲ್ಲಿ ಅಭ್ಯಾಸಿಸಿದರೂ ಕನ್ನಡ ಭಾಷೆಯಲ್ಲಿ ವ್ಯವಹರಿಸುವ ಮೂಲಕ ಕನ್ನಡ ಭಾಷೆಯನ್ನು ಪೋಷಿಸುವಲ್ಲಿ ಮುಂದಾಗಬೇಕು ಎಂದರು.

ಬಾಲಕಿಯರ ಸರ್ಕಾರಿ ಪಿಯೂ ಕಾಲೇಜು ಪ್ರಾಚಾರ್ಯ ಮಹ್ಮದ್ ಶಫಿ ಅಧ್ಯಕ್ಷತೆವಹಿಸಿ ಮಾತನಾಡಿ, ಹೆಚ್ಚು ಅಂಕಗಳಿಕೆಗೆ ನೀಡುವ ಆಧ್ಯತೆಯನ್ನು ಸಾಹಿತ್ಯ ಕೃತಿ ಓದುವಿಕೆಗೂ ನೀಡಬೇಕು. ವಿದ್ಯಾರ್ಥಿದೆಸೆಯಲ್ಲಿಯೇ ಕಥೆ, ಕಾದಂಬರಿ, ಪ್ರವಾಸ ಕಥನ ಸಾಹಿತ್ಯ ಓದುವ ಹವ್ಯಾಸ ಬೆಳೆಸಿಕೊಂಡಲ್ಲಿ ಭವಿಷ್ಯದಲ್ಲಿ ಉತ್ತಮ ಸಾಹಿತಿ, ಚಿಂತಕರಾಗಲು ಸಾಧ್ಯ ಎಂದರು. 2022-23ರ ಸಾಲಿನ ದ್ವಿತೀಯ ಪಿಯೂ ಪರೀಕ್ಷೆಯ ಕನ್ನಡ ವಿಷಯದಲ್ಲಿ ನಾಲ್ವರು ವಿದ್ಯಾರ್ಥಿನಿಯರು ಪೂರ್ಣ ಅಂಕಗಳಿಸಿದ್ದರು ಎಂದರು.

ಉಪನ್ಯಾಸಕ ಡಾ.ಎಂ.ಆರ್.ವಾಗೀಶ್, ಕಸಾಪ ತಾಲೂಕು ಅಧ್ಯಕ್ಷ ಷಣ್ಮುಖಪ್ಪ ಚಿತ್ರಗಾರ, ಸಾಹಿತ್ಯ ಸಿರಿ ಪ್ರತಿಷ್ಠಾನದ ಉಪಾಧ್ಯಕ್ಷ ಎಸ್.ಡಿ.ಬಸವರಾಜ, ಪದಾಧಿಕಾರಿಗಳಾದ ರಾಜು ಬಿಲಂಕರ್, ಚಂದ್ರಯ್ಯ ಸೊಪ್ಪಿಮಠ, ಕವಿತಾಳ ಬಸವರಾಜ, ಬಡಿಗೇರ ಜಿಲಾನ್‌ಸಾಬ್, ಎಸ್.ಶ್ಯಾಂಸುಂದರರಾವ್, ಬಂಗಿ ದೊಡ್ಡ ಮಂಜುನಾಥ ಇತರರಿದ್ದರು. ರಾಜು ಬಿಲಂಕರ್ ನಿರೂಪಿಸಿದರು. ಬಡಿಗೇರ ಜಿಲಾನ್ ಸ್ವಾಗತಿಸಿದರು. ಚಂದ್ರಯ್ಯ ಸೊಪ್ಪಿಮಠ ವಂದಿಸಿದರು.

## ಅಧ್ಯಕ್ಷರಾಗಿ ಟಿ.ಸುಜಾತ ಉಪಾಧ್ಯಕ್ಷರಾಗಿ ಎನ್.ಚಂದ್ರಪ್ಪ ಸೊನ್ನ ಹಾಲು ಉತ್ಪಾದಕರ ಸಂಘಕ್ಕೆ ಅವಿರೋಧ ಆಯ್ಕೆ



■ ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ

ತಾಲೂಕಿನ ಸೊನ್ನ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಟಿ.ಸುಜಾತ ಉಪಾಧ್ಯಕ್ಷರಾಗಿ ಎನ್. ಚಂದ್ರಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಸಿ.ಮಂಜುನಾಥ ತಿಳಿಸಿದರು.

13 ಜನ ಸದಸ್ಯರನ್ನೊಳಗೊಂಡ ಸಹಕಾರ ಸಂಘಕ್ಕೆ, ಒಂದು ಸ್ಥಾನ ಖಾಲಿ ಇದ್ದು, ಅಧ್ಯಕ್ಷ ಉಪಾಧ್ಯಕ್ಷ ಸ್ಥಾನಕ್ಕೆ ಶನಿವಾರ ನಡೆದ ಚುನಾವಣೆಯಲ್ಲಿ ಇವರಿಬ್ಬರು ಮಾತ್ರ ನಾಮಪತ್ರ ಸಲ್ಲಿಸಿದ್ದರು. ಅವರನ್ನು ಅವಿರೋಧವಾಗಿ ಘೋಷಿಸಿದರು.

ಇದೇ ವೇಳೆ ಸಹಕಾರಿ ಅಭಿವೃದ್ಧಿ ಅಧಿಕಾರಿಯಾದ ಲೀಲಾವತಿಯವರು ಮಾತನಾಡಿ, ಪದಾಧಿಕಾರಿಗಳಾಗಿ ಆಯ್ಕೆಯಾಗುವುದು ಮುಖ್ಯವಲ್ಲ. ತಮ್ಮ ಅವಧಿಯಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘ ಅಭಿವೃದ್ಧಿ ಪಡಿಸುವುದು ಮತ್ತು ರೈತರಿಗೆ ಸೌಲಭ್ಯಗಳು ತಲುಪಿಸುವಲ್ಲಿ ಶ್ರಮಿಸಬೇಕು ಎಂದು ಕಿವಿಮಾತು ಹೇಳಿದರು.

ಈ ಸಂದರ್ಭದಲ್ಲಿ ಸಹಕಾರ ಸಂಘದ ನಿರ್ದೇಶಕರಾದ ಟಿ.ದಿನೇಶ್, ಎಚ್.ಎಸ್.ಗೀತಾ, ಎಂ.ಬಸವರಾಜಪ್ಪ, ಸಂತೋಷ, ಎಸ್. ವಿರುಪಾಕ್ಷಗೌಡ, ಎ.ಬಸವನಗೌಡ, ಕೆ.ದುರುಗಪ್ಪ, ಎಸ್.ಎಂ.ರೇವಣಸಿದ್ಧಯ್ಯ, ಎಂ.ಸುವರ್ಣ, ಮಂಜುಳ, ಓಬಿಸಿ ಜಿಲ್ಲಾಧ್ಯಕ್ಷ ಟಿ.ಮಹೇಶ್, ಮುಖಂಡರಾದ ಎಸ್.ಬಸವರಾಜಪ್ಪ, ಪಿ.ಮಲ್ಲಪ್ಪ, ಬಿ.ಎಂ.ಗುರುವಯ್ಯ, ಎಚ್.ಎಂ.ವೀರಯ್ಯ, ತಾ.ಪಂ. ಮಾಜಿ ಸದಸ್ಯ ಪ್ರಭಾಕರ, ಎ.ಕೊಟ್ರಗೌಡ, ಎನ್.ಪುರುಷೋತ್ಥಮ, ಎಂ.ಶಿವರಾಜ್, ಎಚ್. ಪ್ರಕಾಶ್, ಗ್ರಾ.ಪಂ. ಮಾಜಿ ಅಧ್ಯಕ್ಷ ದುರುಗಪ್ಪ ಮತ್ತು ಹಾಲಿ ಸದಸ್ಯರು ಹಾಗೂ ವಿಸ್ತರಣಾಧಿಕಾರಿ ವೆಂಕಟೇಶ, ಕಾರ್ಯದರ್ಶಿ ಮೈನಳ್ಳಿ ಗುಡ್ಡಪ್ಪ ಸೇರಿದಂತೆ ಇತರರಿದ್ದರು.

## ಎನ್‌ಎಸ್‌ಎಸ್ ದೇಶಸೇವೆ ಗುಣ ಬೆಳೆಸುತ್ತದೆ

■ ಹಂಪಿ ಟೈಮ್ಸ್ ಕೊಟ್ಟೂರು

ವಿದ್ಯಾರ್ಥಿಗಳಲ್ಲಿ ಸೇವಾ ಮನೋಭಾವ, ಶಿಸ್ತು,ದೇಶ ಸೇವೆ ,ನಾಯಕತ್ವದ ಗುಣಗಳನ್ನು ಬೆಳೆಸುವಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಪೂರಕವಾಗುತ್ತದೆ ಎಂದು ಶಾಸಕ ಕೆ.ನೇಮಿರಾಜ್ ನಾಯ್ಕ್ ಹೇಳಿದರು.

ತಾಲೂಕಿನ ರಾಂಪುರ ಗ್ರಾಮದಲ್ಲಿ ಶುಕ್ರವಾರ ಸರ್ಕಾರಿ ಪದವಿ ಪೂರ್ವ ಕಾಲೇಜು ರಾಷ್ಟ್ರೀಯ ಸೇವಾ ಯೋಜನೆ ಘಟಕ ವತಿಯಿಂದ ಏರ್ಪಡಿಸಿದ್ದ ಎನ್ ಎಸ್ ಎಸ್ ವಿಶೇಷ ಶಿಬಿರದ ಕಾರ್ಯಕ್ರಮದಲ್ಲಿ ಮಾತನಾಡಿದರು. ಪ್ರತಿಯೊಬ್ಬ ವ್ಯಕ್ತಿ ಮತ್ತು ವಿದ್ಯಾರ್ಥಿ ನಿರ್ದಿಷ್ಟ ಗುರಿಗಳನ್ನು ಅಳವಡಿಸಿಕೊಂಡು ಕಾರ್ಯಪ್ರೌವೃತ್ತರಾದರೆ ಭವಿಷ್ಯದಲ್ಲಿ ಉತ್ಕೃಷ್ಟ ಜೀವನ ನಡೆಸಬಹುದೆಂದು ಕಿವಿಮಾತು ಹೇಳಿದರು.

ಜಿ.ಪಂ ಮಾಜಿ ಸದಸ್ಯ ಎಂ.ಎಂ.ಜೆ ಹರ್ಷವರ್ಧನ್ ಮಾತನಾಡಿ, ವಿದ್ಯಾರ್ಥಿಯ ಜೀವನ ಅಮೂಲ್ಯವಾದದ್ದು ಬಾಲ್ಯದಲ್ಲಿ ದುಶ್ಚಟಗಳಿಗೆ ದಾಸರಾಗದೆ ಶ್ರಮದಿಂದ ಉನ್ನತ ವಿದ್ಯಾಭ್ಯಾಸವನ್ನು ಮಾಡಿ ದೇಶದ ಏಳಿಗೆಯಲ್ಲಿ ಪಾಲುದಾರರಾಗಬೇಕೆಂದು ಉತ್ತೇಜಿಸಿದರು.



ಪ್ರಾಚಾರ್ಯ ಡಾ.ಜಿ. ಸೋಮಶೇಖರ್ ಅಧ್ಯಕ್ಷತೆವಹಿಸಿದ್ದರು. ಗ್ರಾಮ ಪಂಚಾಯಿತಿ ಅಧ್ಯಕ್ಷೆ ಎಚ್ ಎಂ ಜ್ಯೋತಿ ಮರುಳಾರಾಧ್ಯ, ತಹಸೀಲ್ದಾರ ಅಮರೇಶ್ ಜಿ ಕೆ, ಉಪನ್ಯಾಸಕ ಸಿದ್ದೇಶ್ ಕೆ ಮುಖಂಡರಾದ್ದ ನಿವೃತ್ತ ಪ್ರಾಧ್ಯಾಪಕ ರೇವಣಸಿದ್ದಪ್ಪ, ನಿವೃತ್ತ ಬಿಇಓ ವೀರಭದ್ರಯ್ಯ, ನಿವೃತ್ತ ಶಿಕ್ಷಕ ಮೌನ ಚಾರ್ ಸೇರಿದಂತೆ ಗ್ರಾಮ ಪಂಚಾಯತಿ ಸದಸ್ಯರಾದ ನಾಗರಾಜ್ ಉಮಾದೇವಿ, ಇತರರಿದ್ದರು.

# 10 ನಿಮಿಷದಲ್ಲಿ 1 ಎಕರೆ ರಸಾಯನಿಕ ಸಿಂಪರಣೆಯಲ್ಲಿ ಡ್ರೋನ್ ಯಶಸ್ವಿ



■ ಹಂಪಿ ಟೈಮ್ಸ್ ಬಳ್ಳಾರಿ

ನಗರದ ಸಿರುಗುಪ್ಪ ರಸ್ತೆಯ ಲಕ್ಷ್ಮೀನಗರ ಕ್ಯಾಂಪ್ ಹತ್ತಿರದ ಐಸಿಎಆರ್ ಭಾರತೀಯ ಮಣ್ಣು ಮತ್ತು ಜಲ ಸಂರಕ್ಷಣಾ ಸಂಸ್ಥೆಯ ಸಂಶೋಧನಾ ಕೇಂದ್ರದಲ್ಲಿ ರಾಷ್ಟ್ರೀಯ ಕೃಷಿ-ಡ್ರೋನ್ ಯೋಜನೆಯಡಿ ಐಸಿಎಆರ್-ಕೃಷಿ ತಂತ್ರಜ್ಞಾನ ಅಪ್ಲಿಕೇಶನ್ ಸಂಶೋಧನಾ ಸಂಸ್ಥೆ ಲೂಧಿಯಾ ಇವರವತಿಯಿಂದ ಸಂಶೋಧನಾ ಫಾರ್ಮ್‌ನ ಆವರಣದಲ್ಲಿ ನ.16ರಿಂದ ಮೂರು ದಿನಗಳ ಕಾಲ ಹಮ್ಮಿಕೊಂಡಿದ್ದ ಕೃಷಿ ಡ್ರೋನ್ ತಂತ್ರಜ್ಞಾನ ಪ್ರದರ್ಶನ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.

ಐಸಿಎಆರ್ ಭಾರತೀಯ ಮಣ್ಣು ಮತ್ತು ಜಲ ಸಂರಕ್ಷಣಾ ಸಂಸ್ಥೆಯ ಸಂಶೋಧನಾ ಕೇಂದ್ರದ ಪ್ರಭಾರಿ ಮುಖ್ಯಸ್ಥ ಹಾಗೂ ಮಣ್ಣು ಮತ್ತು ಜಲ ಸಂರಕ್ಷಣೆಯ ಪ್ರಧಾನ ವಿಜ್ಞಾನಿ ಡಾ.ಬಿ.ಎಸ್.ನಾಯ್ಕ್ ಅವರು ಡ್ರೋನ್ ಪ್ರದರ್ಶನ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನಗಳ ಮಹತ್ವದ ಕುರಿತು ರೈತರಿಗೆ ತಿಳಿಸಿದರು.

ಹಿರಿಯ ವಿಜ್ಞಾನಿ (ಅರಣ್ಯ) ಡಾ.ಎಂ.ಎನ್.ರಮೇಶ ಅವರು, ರೈತರಿಗೆ ಕೃಷಿ ಡ್ರೋನ್ ಪ್ರದರ್ಶನ ಕಾರ್ಯಕ್ರಮದ ವಿವರಗಳನ್ನು ನೀಡಿದರು. ರಾಷ್ಟ್ರೀಯ ಬೀಜ ನಿಗಮದ ಸಹಾಯಕ ನಿರ್ದೇಶಕ ವಿನೋದ್ ಕುಮಾರ್ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿ, ರೈತರಿಗೆ ಕಾರ್ಯಕ್ರಮದ ಮಹತ್ವವನ್ನು ವಿವರಿಸಿದರು.

ಡ್ರೋನ್ ಒಂದು ಎಕರೆ ಪ್ರದೇಶದಲ್ಲಿ ರಾಸಾಯನಿಕಗಳನ್ನು ಸಿಂಪಡಿಸಲು 10 ನಿಮಿಷಗಳನ್ನು ತೆಗೆದುಕೊಳ್ಳುತ್ತದೆ ಮತ್ತು 12 ಲೀಟರ್ ದ್ರಾವಣವನ್ನು ಮಾತ್ರ ಬಳಸುತ್ತದೆ. ಇದು ಬೆಳೆಗಳಿಗೆ ರಾಸಾಯನಿಕಗಳನ್ನು ಸಿಂಪಡಿಸಲು ಅಗತ್ಯವಾದ ಕಾರ್ಮಿಕರನ್ನು ಹೆಚ್ಚು ಉಳಿಸುತ್ತದೆ ಎಂದು ತಂತ್ರಜ್ಞ ಅಭಿಷೇಕ್ ಕುಮಾರ್ ಡ್ರೋನ್ ಪ್ರಾತ್ಯಕ್ಷಿಕೆಯ ಬಗ್ಗೆ ರೈತರಿಗೆ ಮಾಹಿತಿ ನೀಡಿದರು.

ಕೇಂದ್ರೀಕೃತ ರಾಸಾಯನಿಕಗಳನ್ನು ನಿಖರವಾಗಿ ಸಿಂಪಡಿಸಲು ಇದು ಬಹಳ ಸಹಕಾರಿಯಾಗಿದೆ ಎಂದು ರೈತರು ಅಭಿಪ್ರಾಯ ವ್ಯಕ್ತಪಡಿಸಿದರು. ಅದೇ ರೀತಿಯಾಗಿ ಹೆಚ್ಚಿನ ಪ್ರದೇಶದಲ್ಲಿ ಡ್ರೋನ್ ಮೂಲಕ ಸಿಂಪಡಣೆಯ ಪ್ರಾತ್ಯಕ್ಷಿಕೆ ತೋರಿಸಬೇಕು ಎಂದು ರೈತರು ಒತ್ತಾಯಿಸಿದರು. ಮೆಣಸಿನಕಾಯಿ ಬೆಳೆಗೆ ಬಾಡಿಗೆಗೆ ಡ್ರೋನ್ ಮೂಲಕ ರಾಸಾಯನಿಕಗಳನ್ನು ಸಿಂಪಡಿಸಲು ಪ್ರೇರೇಪಿತರಾಗಿದ್ದು, ಭಾಗವಹಿಸಿದ ಅನೇಕ ರೈತರು ಡ್ರೋನ್‌ನ ಬೆಲೆಯ ಮಾಹಿತಿ ಕೇಳಿದರು ಮತ್ತು ಅವರಲ್ಲಿ ಕೆಲವರು ಮುಂಬರುವ ಬೆಳೆ ಋತುವಿನಲ್ಲಿ ಡ್ರೋನ್ ಅನ್ನು ಖರೀದಿಸಲು ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿದರು.

ಲಕ್ಷ್ಮೀನಗರ ಕ್ಯಾಂಪ್, ಕೋಳೂರು ಮತ್ತು ಸೋಮಸಮುದ್ರ ಗ್ರಾಮಗಳ ಸುಮಾರು 60ಕ್ಕೂ ಹೆಚ್ಚು ರೈತರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸುಮಾರು 20 ಎಕರೆ ಮೆಣಸಿನಕಾಯಿ ಬೆಳೆಗೆ ಡ್ರೋನ್ ಮೂಲಕ ಸಸ್ಯ ಸಂರಕ್ಷಣಾ ಸಿಂಪಡಿಸಿ ಪ್ರಾತ್ಯಕ್ಷಿಕೆ ತೋರಿಸಲಾಯಿತು.

ಈ ಸಂದರ್ಭದಲ್ಲಿ ಉಸ್ತುವಾರಿ ಫಾರ್ಮ್ ಅಧೀಕ್ಷಕರು ಹಾಗೂ ತಂತ್ರಜ್ಞ ಗೌರವ್ ಭಾಟಿ, ತಂತ್ರಜ್ಞ ವೃಷಬೇಂದ್ರಪ್ಪ ಸೇರಿದಂತೆ ಸಂಸ್ಥೆಯ ಅಧಿಕಾರಿಗಳು, ಸಿಬ್ಬಂದಿ ವರ್ಗದವರು, ಸಾರ್ವಜನಿಕರು ಹಾಗೂ ಮತ್ತಿತರರು ಹಾಜರಿದ್ದರು.





ಹೋಲ್ ಸೇಲ್
ಧರದಲ್ಲಿ ಲಭ್ಯ
ರೈತರಿಂದ ನೇರ ಮಾರಾಟ
ಸಾವಯವ ಪದ್ಧತಿಯಲ್ಲಿ ಬೆಳೆದ ತೆಂಗಿನಕಾಯಿ ಮತ್ತು ಬಾಳೆ ಹಣ್ಣು ಹೋಲ್ ಸೇಲ್ ಧರದಲ್ಲಿ ಸಿಗುತ್ತವೆ.
ORGANIC COCONUT & BANANA
Available at Wholesale Price
9845865204 ಹೊಸಪೇಟೆ

TANDUR HOSPITAL
ತಾಂಡೂರ ಆಸ್ಪತ್ರೆ
A Multy-Specialty hospital run by 3rd generation of doctors
ಡಾ.ಸ್ನೇಹಾ ಅಮರ್‌ಜೀತ್ ತಾಂಡೂರ
ಚರ್ಮರೋಗ ತಜ್ಞರು, ಈಸ್ಥೆಟಿಷಿಯನ್ ಮತ್ತು ಡರ್ಮಟೋಸರ್ಜನ್
ಎಂ.ಬಿ.ಬಿ.ಎಸ್., ಎಂ.ಡಿ (ಡಿವಿಎಲ್)
Your Health is Our Priority


ಮೊಡವೆ | ತೊನ್ನು | ಸೋರಿಯಾಸೀಸ್ | ಫಂಗಲ್ | ಸೋಂಕುಗಳು | ಕುಷ್ಠ ರೋಗ | ಚರ್ಮದ ಬೆಳವಣಿಗೆಗಳು | ಕೂದಲು ಉದುರುವಿಕೆ| ಬಟ್ಟತಲೆ | ಬಿಳಿಕೂದಲು | ಅತಿಯಾಗಿ ಬೆವರುವುದು | ಉಗುರಿನ ಸಮಸ್ಯೆಗಳು | ಅಲರ್ಜಿಗಳು | ಚರ್ಮದ ದದ್ದುಗಳು | ಮಕ್ಕಳ ಚರ್ಮದ ಸಮಸ್ಯೆಗಳು ಇತ್ಯಾದಿ
ಮೊ: 9324871459, 08394-358161 ಸರ್ದಾರ್ ಪಟೇಲ್ ರೋಡ್, ಪಟೇಲ್ ನಗರ, ಹೊಸಪೇಟೆ

## ಜಿಲ್ಲಾ ಮಟ್ಟದ ದಿಶಾ ಸಮಿತಿ ಸಭೆ ನ.29ರಂದು

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾ ಪಂಚಾಯತಿ ವತಿಯಿಂದ ಜಿಲ್ಲಾ ಅಭಿವೃದ್ಧಿ ಸಮನ್ವಯ ಉಸ್ತುವಾರಿ ಸಮಿತಿ "ದಿಶಾ" ತ್ರೈಮಾಸಿಕ ಸಭೆಯನ್ನು ಲೋಕಸಭಾ ಸದಸ್ಯರು ಹಾಗೂ ಜಿಲ್ಲಾ ಮಟ್ಟದ ದಿಶಾ ಸಮಿತಿಯ ಅಧ್ಯಕ್ಷ ವೈ.ದೇವೇಂದ್ರಪ್ಪ ಅವರ ಅಧ್ಯಕ್ಷತೆಯಲ್ಲಿ ನ.29ರಂದು ಬೆಳಿಗ್ಗೆ 11ಕ್ಕೆ ಜಿಲ್ಲಾ ಪಂಚಾಯತ್‌ನ ನಜೀರ್‌ಸಾಬ್ ಸಭಾಂಗಣದಲ್ಲಿ ನಡೆಯಲಿದೆ ಎಂದು ದಿಶಾ ಸಮಿತಿಯ ಸದಸ್ಯ ಕಾರ್ಯದರ್ಶಿಗಳೂ ಆಗಿರುವ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಅವರು ತಿಳಿಸಿದ್ದಾರೆ.

## ನ.27ರಂದು ವಿಕಲಚೇತನರ ಕ್ರೀಡೆ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳು

**ಹಂಪಿ ಟೈಮ್ಸ್ ಬಳ್ಳಾರಿ**

ವಿಶ್ವ ವಿಕಲಚೇತನರ ದಿನಾಚರಣೆ ಅಂಗವಾಗಿ ಜಿಲ್ಲೆಯ ವಿಕಲಚೇತನರಿಗೆ ನ.27ರಂದು ಬೆಳಿಗ್ಗೆ 09 ಗಂಟೆಗೆ ವಿಮ್ಸ್ ಕ್ರೀಡಾಂಗಣದಲ್ಲಿ ವಿಕಲಚೇತನರ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಹೆಚ್.ಎಂ. ಗೋವಿಂದಪ್ಪ ಅವರು ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಹೆಚ್.ಎಂ.ಗೋವಿಂದಪ್ಪ ಅವರ ಮೊ.9008485380, ಯೋಜನ ಸಹಾಯಕ ಚಿದಾನಂದ.ಜಿ ಅವರ ಮೊ.9972813152, ಹಾಗೂ ಬಳ್ಳಾರಿ ಎಂಆರ್‌ಡಬ್ಲ್ಯೂ ರಾಣಿ ಮೊ.8880875620, ಸಿರುಗುಪ್ಪ ಎಂಆರ್‌ಡಬ್ಲ್ಯೂ ಸಾಬೇಶ್ ಮೊ.9743509698 ಸಂಡೂರು ಎಂಆರ್‌ಡಬ್ಲ್ಯೂ ಕರಿಬಸಜ್ಜಮೊ.9632052270 ಅಥವಾ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಚೇರಿಯ ದೂ.08392267886 ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿವಿಧ ಸಮಸ್ಯೆಗಳಿಗೆ ಸ್ಥಳದಲ್ಲೆ ಪರಿಹಾರ

### ಜನರ ಸಮಸ್ಯೆಗಳ ಪರಿಹಾರಕ್ಕೆ ಅಧಿಕಾರಿಗಳು ಶ್ರಮಿಸಿ ಎಂದ ಡಾ. ಎನ್.ಟಿ.ಶ್ರೀನಿವಾಸ್ । 15 ದಿನಕ್ಕೊಮ್ಮೆ ತಾಲೂಕು ಮಟ್ಟದ ಜನತಾದರ್ಶನ ಡಿಸಿ ದಿವಾಕರ ಹೇಳಿಕೆ

**ಹಂಪಿ ಟೈಮ್ಸ್ ಹೊಸಪೇಟೆ**


ಜನರ ಸಮಸ್ಯೆಗಳಿಗೆ ತ್ವರಿತವಾಗಿ ಪರಿಹರಿಸಲು ಎಲ್ಲಾ ಅಧಿಕಾರಿಗಳು ಶ್ರಮಿಸಬೇಕು ಎಂದು ಕೂಡ್ಲಿಗಿ ಶಾಸಕರಾದ ಡಾ. ಎನ್.ಟಿ.ಶ್ರೀನಿವಾಸ್ ಹೇಳಿದರು.

ವಿಜಯನಗರ ಜಿಲ್ಲಾಡಳಿತದಿಂದ ಜಿಲ್ಲೆಯ ಶನಿವಾರ ಕೂಡ್ಲಿಗಿ ತಾಲ್ಲೂಕಿನ ಪರಿವೀಕ್ಷಣಾ ಮಂದಿರದಲ್ಲಿ ಹಮ್ಮಿಕೊಂಡಿದ್ದ ತಾಲ್ಲೂಕು ಮಟ್ಟದ 'ಜನತಾ ದರ್ಶನ' ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿದರು.

ಸಾರ್ವಜನಿಕ ಸಮಸ್ಯೆಗಳ ಅರ್ಜಿ ಸ್ವೀಕಾರ ಹಾಗೂ ಅವುಗಳನ್ನು ಸ್ಥಳದಲ್ಲಿಯೇ ತ್ವರಿತವಾಗಿ ಪರಿಹರಿಸಲು ರಾಜ್ಯ ಸರ್ಕಾರದ ನೂತನ ಜನತಾ ದರ್ಶನ ಕಾರ್ಯಕ್ರಮ ಪೂರಕವಾಗಿದೆ. ಇದರಿಂದ ಸಾರ್ವಜನಿಕರ ಸಮಸ್ಯೆಗಳಿಗೆ ಶೀಘ್ರವಾಗಿ ಪರಿಹಾರದ ಜೊತೆಗೆ ಸಕಾಲದಲ್ಲಿ ಸೇವೆಗಳು ಸಿಗಲಿವೆ. ಕಾರ್ಯಕ್ರಮದಲ್ಲಿ ಸ್ವೀಕೃತವಾಗುವ ಜನರ ಅಹವಾಲುಗಳಿಗೆ ಶೀಘ್ರದಲ್ಲಿಯೇ ಪರಿಹಾರ ನೀಡಲು ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಸಮರ್ಪಕವಾಗಿ ಕುಡಿಯುವ ನೀರು ಪೂರೈಸಲು 15ನೇ ಹಣಕಾಸು ಯೋಜನೆಯಡಿ ಅವಕಾಶವಿದ್ದು, ಸಂಬಂಧಪಟ್ಟ ಗ್ರಾಮ ಪಂಚಾಯಿತಿಗಳು, ನಗರ ಸ್ಥಳೀಯ ಸಂಸ್ಥೆಗಳು ಕ್ರಮ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಕಾರ್ಯಕ್ರಮ ಉದ್ಘಾಟಿಸಿ, ಸಾರ್ವಜನಿಕರಿಂದ ಅರ್ಜಿ ಸ್ವೀಕರಿಸಿ ಅಹವಾಲುಗಳನ್ನು ಆಲಿಸಿ ಮಾತನಾಡಿದ ಅವರು, ಸರ್ಕಾರದ ನಿರ್ದೇಶನದನ್ವಯ ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಿ, ಪರಿಹಾರ ಕೈಗೊಳ್ಳಲು ಪ್ರತಿ ಹದಿನೈದು ದಿನಗಳಿಗೊಮ್ಮೆ ಹಮ್ಮಿಕೊಳ್ಳುವ ತಾಲ್ಲೂಕುಮಟ್ಟದ ಜನತಾದರ್ಶನ ಕಾರ್ಯಕ್ರಮ ಮೂಲಕ ಸಾರ್ವಜನಿಕರ ಅಹವಾಲುಗಳಿಗೆ ಸ್ಪಂದಿಸಲಾಗುತ್ತಿದೆ. ಕಾರ್ಯಕ್ರಮದಲ್ಲಿ ಸ್ವೀಕೃತವಾಗುವ ಅರ್ಜಿಗಳ ವಿಲೇವಾರಿಗೆ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳು ನಿಯಮಾನುಸಾರ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ಪಿಂಚಣಿ ಸೌಲಭ್ಯ ಸೇರಿದಂತೆ ಕೆಲವೊಂದನ್ನು ಅಹವಾಲುಗಳಿಗೆ ಜಿಲ್ಲಾಧಿಕಾರಿಗಳು ಸ್ಥಳದಲ್ಲಿಯೇ ಪರಿಹರಿಸಿದರು. ಅರ್ಹ 30 ಫಲಾನುಭವಿಗಳಿಗೆ ನಿವೇಶನ ಹಕ್ಕುಪತ್ರ ವಿತರಣೆ ವಿತರಣೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.



### ರೈತರ ಹಣ ಮುರುವಳಿ ಮಾಡದಂತೆ ಡಿಸಿ ಸೂಚನೆ

ಪಟ್ಟಣದ ಉಪ ನೋಂದಣಿ ಕಚೇರಿಯಲ್ಲಿ ತುಂಡು ಭೂಮಿಗಳನ್ನು ನೋಂದಣಿ ಮಾಡುತ್ತಿಲ್ಲ ಈಗಾದರೆ ಬಡವರ ಗತಿ ಹೇಗೆ ಎಂದು ಗೋವಿಂದ ಗಿರಿ ಗೊಲ್ಲರ ಹಟ್ಟಿ ತಿಪ್ಪೇಸ್ವಾಮಿ ಹಾಗೂ ಕೂಡ್ಲಿಗಿಯ ಕಾಲ್ಚೆಟ್ಟಿ ಈಶಪ್ಪ ಜನತಾ ದರ್ಶನದಲ್ಲಿ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರಿಗೆ ಮನವಿ ಮಾಡಿದರು. ಇದಕ್ಕೆ ಉತ್ತರಿಸಿದ ಜಿಲ್ಲಾಧಿಕಾರಿ 12 ಸೆಂಟ್ಸ್ ಮೇಲಿರುವ ತುಂಡು ಭೂಮಿಗಳನ್ನು ನೋಂದಣಿ ಮಾಡಿಸಲು ಸರ್ಕಾರದ ಆದೇಶವಿದೆ ಎಂದು ಸ್ಥಳದಲ್ಲಿದ್ದ ಉಪ ನೋಂದಣಿ ಅಧಿಕಾರಿಗೆ ಸೂಚನೆ ನೀಡಿ ನೋಂದಣಿ ಮಾಡುವಂತೆ ನಿರ್ದೇಶನ ನೀಡಿದರು. ಬ್ಯಾಂಕಿನಲ್ಲಿ ಬೆಳೆಸಾಲ ಪಡೆದಿದ್ದು,ಇನ್ನೂ ಅರ್ಧ ಸಾಲ ತೀರಿಸಬೇಕಿದೆ.ಆದರೆ ಸರ್ಕಾರದ ಮಾಶಸನ,ಗೃಹಲಕ್ಷ್ಮಿ ಯೋಜನೆಯ ಹಣವನ್ನು ಬ್ಯಾಂಕಿನವರು ಸಾಲಕ್ಕೆ ಮುರವಳಿ ಮಾಡುತ್ತಿದ್ದಾರೆ ಬರ ಪರಿಸ್ಥಿತಿಯಲ್ಲಿ ಈಗಾದರೆ ಬಡ ರೈತರ ಜೀವನ ಸಾಗಿಸುವುದು ಹೇಗೆ ಎಂದು ಚಂದ್ರಶೇಖರ ಪುರದ ರೈತರಾದ ಸುಭಾಷಿಣಿ ಹಾಗೂ ಕಟ್ಟೆಬಸಪ್ಪ ಜಿಲ್ಲಾಧಿಕಾರಿಗೆ ಮನವಿ ಮಾಡಿದರು. ಬರ ಹಿನ್ನೆಲೆಯಲ್ಲಿ ರೈತರ ಖಾತೆಯ ಯಾವುದೇ ಹಣವನ್ನು ಬ್ಯಾಂಕ್ ಅಧಿಕಾರಿಗಳು ರೈತರ ಒಪ್ಪಿಗೆ ಇಲ್ಲದೆ ಮುರಿಯುವಂತಿಲ್ಲ ಈ ಬಗ್ಗೆ ಅರ್ಜಿ ಕೊಡಿ ಹಣವನ್ನು ಮರು ಸಂದಾಯ ಮಾಡಿಸುವೆ ಎಂದು ರೈತರಿಗೆ ತಿಳಿಸಿ ಸ್ಥಳದಲ್ಲಿದ್ದ ಸೀಡ್ ಬ್ಯಾಂಕ್ ಮ್ಯಾನೇಜರ್ ಗೂ ರೈತರ ಹಣವನ್ನು ಮುರವಳಿ ಮಾಡದಂತೆ ಸೂಚನೆ ನೀಡಿದರು.

> ಸಮಾಜದ ಕಟ್ಟಕಡೆಯ ವ್ಯಕ್ತಿಗಳಿಗೂ ಸೌಲಭ್ಯಗಳು ಸಿಗಲು ಸರ್ಕಾರ ಜನತಾದರ್ಶನ ಕಾರ್ಯಕ್ರಮಗಳನ್ನು ಆಯೋಜನೆ ಮಾಡಿರುವುದು ಸಾರ್ಥಕ ಕಾರ್ಯವಾಗಿದೆ. ಜನರ ಅಹವಾಲನ್ನ ಅಧಿಕಾರಿಗಳು ಸ್ವೀಕರಿಸಿ, ಕಾಲಮಿತಿಯೊಳಗೆ ಅವರ ಸಮಸ್ಯೆಗಳನ್ನ ಬಗೆಹರಿಸಲು ಪ್ರಯತ್ನಿಸಬೇಕು. ವಿಳಂಭ ಧೋರಣೆ ಸರಿಯಲ್ಲ, ಆ ನಿಟ್ಟಿನಲ್ಲಿ ಸರ್ಕಾರ ತಾಲೂಕು ಮಟ್ಟದಲ್ಲಿ ಈ ಕಾರ್ಯಕ್ರಮ ಹಮ್ಮಿಕೊಂಡಿದೆ ಅಧಿಕಾರಿಗಳು ಶ್ರಮವಹಿಸಿ ಕರ್ತವ್ಯ ನಿರ್ವಹಿಸಬೇಕು. ಇದಕ್ಕೆ ಪೂರಕವಾಗಿ ಸದಾ ನಿಮ್ಮೊಂದಿಗೆ ನಾನು ಹಾಗೂ ಜಿಲ್ಲಾಧಿಕಾರಿಗಳು ಇರುತ್ತೇವೆ.
>
> । ಡಾ.ಎನ್. ಟಿ.ಶ್ರೀನಿವಾಸ್, ಶಾಸಕ



### ಹಣ ಮಂಜೂರಿಗೆ ಸೂಚನೆ

ವಿಮುಕ್ತ ದೇವದಾಸಿಯರು ಸಂಘದ ಮೂಲಕ ಸ್ವಾಲಂಭಿ ಜೀವನ ನಡೆಸಲು ತಾಲೂಕಿನ ಅಂಗನವಾಡಿ ಕೇಂದ್ರಗಳಿಗೆ ಪೌಷ್ಟಿಕಾಹಾರ ಚಿಕ್ಕಿ ಘಟಕದ ಮೂಲಕ ಚಿಕ್ಕಿಗಳನ್ನು ಅಂಗನವಾಡಿ ಕೇಂದ್ರಗಳಿಗೆ ಸರಬರಾಜು ಮಾಡುತ್ತಿದ್ದೇವೆ.ಕಳೆದ ಮೂರು ತಿಂಗಳಿನಿಂದ ನಮಗೆ ಅನುದಾನ ಇಲ್ಲವೆಂದು ಚಿಕ್ಕಿ ಹಣವನ್ನು ನೀಡುತ್ತಿಲ್ಲ. ಅಧಿಕಾರಿಗಳು ಹಣ ಕೇಳಲು ಹೋದರೆ ನಮ್ಮನ್ನು ಕ್ಯಾರೆ ಎನ್ನುತ್ತಿಲ್ಲ, ಬಡ್ಡಿಹಣ ಪಡೆದು ಬಂಡವಾಳ ಹಾಕಿ ಘಟಕ ನಡೆಸುತ್ತಿದ್ದೇವೆ,ಕೂಲಿ ಕಾರ್ಮಿಕರಿಗೂ ಸಂಬಳ ನೀಡಿಲ್ಲ ಲಕ್ಷಾಂತರ ರೂಪಾಯಿಗಳು ನಮ್ಮ ಮೈಮೇಲೆ ಬಿದ್ದಿದೆ ಈಗಾದರೆ ನಮ್ಮ ಗತಿ ಯಾರು ಕೇಳಬೇಕು ಎಂದು ವಿಮುಕ್ತ ದೇವದಾಸಿ ಗಂಗಮ್ಮ ಜಿಲ್ಲಾಧಿಕಾರಿ ಬಳಿ ಅಲವತ್ತು ಕೊಂಡಳು. ಸ್ಥಳದಲ್ಲಿದ್ದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಡಿ.ಡಿ ಹಾಗೂ ಸಿಡಿಪಿಒ ಅವರನ್ನು ಕರೆದು ಈ ಕೂಡಲೇ ಇವರ ಹಣವನ್ನು ಮಂಜೂರು ಮಾಡುವಂತೆ ನಿರ್ದೇಶನ ನೀಡಿದರು.ಅದರಂತೆ ಸಂಧ್ಯಾಸುರಕ್ಷಾ, ಪಡಿತರ,ಪೋಡಿ ಖಾತೆ,ವಿದ್ಯುತ್ ಸಮಸ್ಯೆ, ಗಂಗಾ ಕಲ್ಯಾಣ, ಬ್ಯಾಂಕ್ ಸಾಲ,ವಸತಿ,ಸಾರಿಗೆ ಸೇರಿದಂತೆ ಸಾರ್ವಜನಿಕರ ನೂರಾರು ಅಹವಾಲುಗಳಿಗೆ ಶಾಸಕ ಎನ್.ಟಿ.ಶ್ರೀನಿವಾಸ್ ಹಾಗೂ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ತಾಳ್ಮೆಯಿಂದ ಆಲಿಸಿ, ಸಂಭಂದಿಸಿದ ಅಧಿಕಾರಿಗಳಿಗೆ ಅರ್ಜಿಗಳನ್ನು ರವಾನಿಸಿ ಸಮಸ್ಯೆಗಳನ್ನು ಬಗೆಹರಿಸಲು ನಿರ್ದೇಶನ ನೀಡಿದರು. ಇದೇ ಸಂಧರ್ಭದಲ್ಲಿ ವಿವಿಧ ಇಲಾಖೆಗಳಿಗೆ ಸುಮಾರು 150 ಕ್ಕೂ ಹೆಚ್ಚು ಅರ್ಜಿಗಳನ್ನು ಸಾರ್ವಜನಿಕರು ನೀಡಿದರು.

# ಬಿಡಿಸಿಸಿ ಬ್ಯಾಂಕ್ ಚುನಾವಣೆ ಮತ್ತೊಮ್ಮೆ ಮುಂದೂಡಿಕೆ
# ರೈತರ ಹಿತಕ್ಕಿಂತ ಗದ್ದುಗೆಗೆ ಕಿತ್ತಾಟ

**ಹಂಪಿ ಟೈಮ್ಸ್ ಹೊಸಪೇಟೆ**

ರೈತರ ಬಲವರ್ಧನೆಗಾಗಿಯೆ ಸ್ಥಾಪನೆ ಗೊಂಡಿರುವ ಬಳ್ಳಾರಿ ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕ್ ಇದೀಗ ರೈತರ ಹಿತಕ್ಕಿಂತ ಅಧಿಕಾರದ ಗದ್ದುಗೆಗಾಗಿ ಕಿತ್ತಾಟ ನಡೆಯುತ್ತಿದೆ ಎನ್ನುವುದು ಗುಟ್ಟಾಗಿ ಉಳಿದಿಲ್ಲ. ಆಡಳಿತ ಮಂಡಳಿಗೆ 14 ನಿರ್ದೇಶಕರು ಆಯ್ಕೆಯಾಗಿದ್ದಾರೆ. ನ.8 ರಂದು ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದ್ದ ಚೊಕ್ಕ ಬಸವನಗೌಡ, ಉಪಾಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದ್ದ ದ್ವಾರಕೇಶ ಆಯ್ಕೆ ವೇಳೆ ತಮ್ಮ ಬೆಂಬಲಿಗರೊಂದಿಗೆ ಗೈರಾಗಿದ್ದರಿಂದ ಕೋರಂ ಕೊರತೆ ಕಾರಣ ನೀಡಿ ಚುನಾವಣಾಧಿಕಾರಿ ನ.18ಕ್ಕೆ ಆಯ್ಕೆಗೆ ಮುಂದೂಡಿದರು. ಇದೀಗ ಎಲ್ಲರೂ ಗೈರಾಗಿದ್ದರಿಂದ ಮತ್ತೊಮ್ಮೆ ಮುಂದೂಡಿರುವುದು ರೈತರು ಸೇರಿದಂತೆ ಹಿರಿಯ ಸಹಕಾರಿಗಳಲ್ಲಿ ಬೇಸರ ಮೂಡಿಸಿದೆ.

ಈಗಾಗಲೇ ನಾಮಪತ್ರ ಸಲ್ಲಿಸಿದ ಅಭ್ಯರ್ಥಿಗಳೇ ಆಯ್ಕೆಗೆ ಅರ್ಹರಾಗಿದ್ದ, ಹೊಸಬರಿಗೆ ಅವಕಾಶವಿಲ್ಲದಂತಾಗಿದೆ. ಶನಿವಾರ ಚುನಾವಣಾಧಿಕಾರಿಗಳು ಮಧ್ಯಾಹ್ನ 2 ಗಂಟೆವರೆಗೆ ನಿರ್ದೇಶಕರಿಗಾಗಿ ಕಾದರು. ಆದರೆ ಅಧ್ಯಕ್ಷ ಸ್ಥಾನದ ಆಕಾಂಕ್ಷಿಗಳಾದ ಜಿ.ತಿಪ್ಪೇಸ್ವಾಮಿ ಮತ್ತು ಚೊಕ್ಕ ಬಸವನಗೌಡ ಎರಡೂ ಬಣದವರು ಶನಿವಾರ ಗೈರಾಗಿದ್ದರಿಂದ ಕೋರಂ ಕೊರತೆಯಿಂದ ಮತ್ತೊಮ್ಮೆ ಆಯ್ಕೆ ಪ್ರಕ್ರಿಯೆಯನ್ನು ಮುಂದೂಡಲಾಗಿದೆ ಎಂದು ಚುನಾವಣಾಧಿಕಾರಿ ತಹಸೀಲ್ದಾರ್ ವಿಶ್ವಜೀತ್ ಮೆಹತಾ ತಿಳಿಸಿದರು. ಈ ಹಿಂದೆಗಿಂತ ಈ ಭಾರಿಯ ಅಧ್ಯಕ್ಷರ ಚುನಾವಣೆಯನ್ನು ಆಡಳಿತ ಸರ್ಕಾರ ಪ್ರತಿಷ್ಠೆಯಾಗಿ ತೆಗೆದುಕೊಂಡಿದ್ದು, ಚುನಾವಣಾ ಆಯೋಗದ ಮೇಲೂ ಪ್ರಭಾವ ಬೀರುವ ಸಾಧ್ಯತೆಗಳಿವೆ ಎಂಬ ಮಾತುಗಳು ದಟ್ಟವಾಗಿವೆ ಕೇಳಿಬಂದಿದ್ದು, ರೈತರ ಹಿತ ಕಾವುದೇ ಕಾದುನೋಡಬೇಕಿದೆ.



### ಸಹಕಾರ ಕ್ಷೇತ್ರದಲ್ಲಿ ರಾಜಕೀಯ ರಂಗು

ಜಿಲ್ಲಾ ಕಾಂಗ್ರೆಸ್‌ನ ಹೊಗೆಯಾಡುತ್ತಿರುವ ಭಿನ್ನಮತ ಇದೀಗ ಫೋನ್ ಕಾಲ್‌ನಲ್ಲಿ ಬಹಿರಂಗವಾಗಿದೆ. ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ, ಉಪಾಧ್ಯಕ್ಷ ಚುನಾವಣೆ ವಿಚಾರವಾಗಿ ಮಾಜಿ ಸಂಸದ ವಿ.ಎಸ್.ಉಗ್ರಪ್ಪಗೆ ಕರೆ ಮಾಡಿದ್ದ ಕಾರ್ಯಕರ್ತರೊಬ್ಬರು ನಾಯಕರ ನಡುವಿನ ಭಿನ್ನಮತ ಮತ್ತು ಕಳೆದ ಲೋಕಸಭೆ ಚುನಾವಣೆಯಲ್ಲಿ ನಡೆದಿದೆ ಎನ್ನಲಾದ ಪಕ್ಷ ವಿರೋಧಿ ಚಟುವಟುಕೆಗಳು, ಬೆನ್ನಿಗೆ ಚೂರಿ ಹಾಕಿದ್ದಾರೆ ಎಂಬಿತ್ಯಾದಿ ಪದಗಳನ್ನು ಬಳಕೆ ಮಾಡುವ ಮೂಲಕ ಪಕ್ಷದಲ್ಲಿ ಎಲ್ಲವೂ ಸರಿಯಿಲ್ಲ. ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಸ್ಥಾನದಿಂದ ಜಿ. ತಿಪ್ಪೇಸ್ವಾಮಿಯನ್ನು ದೂರವಿಡಬೇಕು ಎಂದು ಮನವಿ ಮಾಡಿರುವುದು ಗಮನಾರ್ಹ.

**ಬಣಗಳ ಹಗ್ಗ ಜಗ್ಗಾಟ:** ಬಿಡಿಸಿಸಿ ಅಧ್ಯಕ್ಷ ಸ್ಥಾನದ ಆಕಾಂಕ್ಷಿಗಳಾಗಿರುವ ತಿಪ್ಪೇಸ್ವಾಮಿ ಮತ್ತು ಚೊಕ್ಕ ಬಸವನಗೌಡ ನಡುವಿನ ಪೈಪೋಟಿ ತಾರಕಕ್ಕೇರಿದೆ. ಈ ನಡುವೆ ಮಾಜಿ ಶಾಸಕ ಹಾಗೂ ಬ್ಯಾಂಕ್‌ನ ನಿರ್ದೇಶಕ ಭೀಮಾನಾಯ್ಕ ಮತ್ತು ಮಾಜಿ ಸಚಿವ ಪಿ.ಟಿ.ಪರಮೇಶ್ವರ ನಾಯ್ಕ ಬೆಂಬಲಿತ ಬಣಗಳ ಮಧ್ಯೆ ಹಣಾಹಣಿ ಏರ್ಪಟ್ಟಿದೆ. ಸಿಎಂ ಅಂಗಳಕ್ಕೆ ಆಯ್ಕೆ ಚೆಂಡು ಎಸೆಯಲಾಗಿದೆ. ಇದನ್ನು ಸೌಹಾರ್ದಯುತವಾಗಿ ಇತ್ಯರ್ಥಗೊಳಿಸುವಂತೆ ಸಿಎಂ ಸಿದ್ದರಾಮಯ್ಯನವರು ಸಹಕಾರ ಸಚಿವ ಕೆ.ಎನ್. ರಾಜಣ್ಣಗೆ ವಹಿಸಲಾಗಿದೆ ಎಂಬುದು ಕೇಳಿಬಂದಿದೆ. ಸಚಿವ ಕೆ.ಎನ್.ರಾಜಣ್ಣ ಕರೆ ಮೇರೆಗೆ ಕಾಂಗ್ರೆಸ್‌ನ ನಿರ್ದೇಶಕರು ಶುಕ್ರವಾರ ಸಂಜೆಯೇ ಬೆಂಗಳೂರಿಗೆ ಪ್ರಯಾಣಿಸಿದ್ದರಿಂದ ಶನಿವಾರದ ಆಯ್ಕೆ ಸಭೆ ಗೈರಾಗಿದ್ದಾರೆ ಎನ್ನಲಾಗಿದೆ. ಶನಿವಾರವೂ ಬೆಂಗಳೂರಿನಲ್ಲಿ ಸಚಿವರ ಬೇಟಿ ಸಾಧ್ಯವಾಗದ್ದರಿಂದ ನಿರ್ದೇಶಕರು ತ್ರಿಶಂಕು ಸ್ಥಿತಿಯಲ್ಲಿದ್ದಾರೆ.

# ಯೋಜನೆಗಳ ಪ್ರಯೋಜನ ಪಡೆಯಿರಿ




**ಹಂಪಿ ಟೈಮ್ಸ್ ಕೊಟ್ಟೂರು**

ಹ್ಯಾಳ್ಯಾ ಗ್ರಾ.ಪಂ ವ್ಯಾಪ್ತಿಯಲ್ಲಿ ಸರ್ಕಾರದ ಅಭಿವೃದ್ಧಿ ಕಾರ್ಯಗಳು ಅಪೂರ್ಣವಾಗಿದ್ದರೆ ನಮ್ಮ ಗಮನಕ್ಕೆ ತರುವ ಮೂಲಕ ಅಭಿವೃದ್ಧಿ ಕಾರ್ಯಗಳನ್ನು ಪೂರ್ಣಗೊಳ್ಳಿಸಿಕೊಂಡು ಅದರ ಸದುಪಯೋಗ ಪಡೆದುಕೊಳ್ಳಿ ಎಂದು ತಾಲೂಕು ಲೆಕ್ಕ ಪರಿಶೋಧನಾ ಸಂಯೋಜಕರು ನಿರ್ಮಲಾ ಆಚಾರ ಹೇಳಿದರು.

ತಾಲೂಕಿನ ಹ್ಯಾಳ್ಯಾ ಗ್ರಾಮ ಪಂಚಾಯತಿಯಲ್ಲಿ ಶನಿವಾರ ನಡೆದ 2022-23 ನೇ ಸಾಲಿನ ನರೇಗಾ, 15 ನೇ ಹಣಕಾಸು ಯೋಜನೆಯ ಸಾಮಾಜಿಕ ಪರಿಶೋಧನಯ ಗ್ರಾಮ ಸಭೆಯಲ್ಲಿ ಮಾತನಾಡಿದರು.

15ನೇ ಹಣಕಾಸು ಯೋಜನೆ ಮತ್ತು ನರೇಗ ಯೋಜನೆಯಲ್ಲಿ ನಡೆದ ಕಾಮಗಾರಿಗಳು ಸೇರಿದಂತೆ ಎಲ್ಲಾ ಲೆಕ್ಕ ಪತ್ರಗಳನ್ನು ಪರಿಶೀಲಿಸದ ನಂತರ ಬಹಿರಂಗವಾಗಿ ಸಭೆಯಲ್ಲಿ ಲೆಕ್ಕ ಪತ್ರಗಳ ಬಗ್ಗೆ ವಾಚನ ಮಾಡಿದರು.

ದಾಖಲೆ ಪ್ರಕಾರ ಬಹುತೇಕ ಅಭಿವೃದ್ಧಿಗಳು ಪೂರ್ಣಗೊಂಡಿದ್ದು, ಅಭಿವೃದ್ಧಿ ಅಧಿಕಾರಿಗಳು ಉತ್ತಮ ಕಾರ್ಯ ನಿರ್ವಹಣೆ ನಿರ್ವಹಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಭೆಯ ಅಧ್ಯಕ್ಷತೆಯನ್ನು ಗ್ರಾ.ಪಂ ಅಧ್ಯಕ್ಷ ಹಾಲಮ್ಮ ಡಿ. ವಹಿಸಿದ್ದರು. ಸಭೆಯಲ್ಲಿ ಉಪಾಧ್ಯಕ್ಷ ಡಿ.ನಾಗೇಶ್, ನೋಡಲ್ ಅಧಿಕಾರಿ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿ ಅಹಮದ್. ಗ್ರಾಮ ಪಂಚಾಯತ್ ಸದಸ್ಯರು, ಹ್ಯಾಳ್ಯ, ಮಲ್ಲನಾಯಕಹಳ್ಳಿ, ಲೋಟ್ಟಾನಕೆರೆ, ಮೋತಿಕಲ್ ತಂಡಾ ಗ್ರಾಮಗಳ ಗ್ರಾಮಸ್ಥರು ಗ್ರಾಮ ಸಭೆಯಲ್ಲಿ ಪಾಲ್ಗೊಂಡಿದ್ದರು. ಪಿಡಿಒ ಸಿಎಚ್‌ಎಂ ಗಂಗಾಧರ ಸ್ವಾಗತಿಸಿದರು.

# ವಿದ್ಯುತ್ ಬಾಕಿ ಬಿಲ್ ಪಾವತಿಸದಿದ್ದರೆ ಸಂಪರ್ಕ ಕಡಿತ

### ಮಂಜೂರಾತಿ ಪಡೆಯದೆ ಸಂಪರ್ಕ ಪಡೆದರೆ ವಿದ್ಯುತ್ ಕಳ್ಳತನ ಪ್ರಕರಣ ಕೇಸು ದಾಖಲು

**ಹಂಪಿ ಟೈಮ್ಸ್ ಹೊಸಪೇಟೆ**

ಜೆಸ್ಕಾಂ ಹೊಸಪೇಟೆ ಉಪವಿಭಾಗ-1ರ ವಿದ್ಯುತ್ ಗ್ರಾಹಕರು ಬಾಕಿ ವಿದ್ಯುತ್ ಬಿಲ್ಲು ಪಾವತಿಸುವಂತೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.

ಹೊಸಪೇಟೆಯ ಟಿ.ಬಿ.ಡ್ಯಾಂ, ದೋಬಿಘಾಟ್, ಶಾಂತಿನಗರ, ಇಂದಿರಾನಗರ, ದೇವಿನಗರ, ಟಿಪ್ಪುನಗರ, ಗಾಂಧಿನಗರ, ವರಕೇರಿ ಎಸ್-6, ಚಾಪಲಕಟ್ಟ, ಚಿತ್ತವಾಡಗಿ, ಜಬ್ಬಲ್, ಹಳೆ ಅಮರಾವತಿ, ವರಕೇರಿ, ಸೋನಿಯಾನಗರ, ಇವಿ ಕ್ಯಾಂಪ್, ಪಿ.ಎಲ್.ಸಿ., ಜನತಾ ಕಾಲೋನಿ, ವೆಂಕಯ್ಯ ಕ್ಯಾಂಪ್, ಬಿ.ಟಿ.ಆರ್‌ನಗರ, ಗಾಂಧಿ ಕಾಲೋನಿ, ವಿವೇಕಾನಂದ ನಗರ, ಸಂಡೂರ್ ರೋಡ್, ಚಪ್ಪರದಹಳ್ಳಿ, ಎಲ್. ಎಫ್.ಎಸ್ ಸ್ಕೂಲ್ ಹಿಂದೆ, ಭಗತ್‌ಸಿಂಗ್ ನಗರ, ಚೆಕ್‌ಪೋಸ್ಟ್, ಗಾಂಧಿ ಕಾಲೋನಿ ಪ್ರದೇಶಗಳ ವಿದ್ಯುತ್‌ಬಿಲ್ 6.26 ಕೋಟಿಯಷ್ಟು ಬಾಕಿ ಇರುವುದರಿಂದ ಎಲ್ಲಾಗ್ರಾಹಕರು ನಿಗದಿತ ಅವಧಿಯೊಳಗೆ ವಿದ್ಯುತ್ ಬಿಲ್ಲು ಪಾವತಿಸಬೇಕು.

ಒಂದು ವೇಳೆ ವಿದ್ಯುತ್ ಬಿಲ್ಲು ಪಾವತಿಸದ ಗ್ರಾಹಕರುಗಳಿಗೆ ಮುನ್ಸೂಚನೆ ನೀಡದೆ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲಾಗುವುದು. ವಿದ್ಯುತ್ ಕಡಿತಗೊಳಿಸಿದ ಮೇಲೆ ಗ್ರಾಹಕರುಅನಧಿಕೃತವಾಗಿ ವಿದ್ಯುತ್ ಅಳವಡಿಸಿಕೊಂಡಲ್ಲಿ ಮತ್ತು ಇಲಾಖೆಯಿಂದ ಮಂಜೂರಾತಿ ಪಡೆಯದೆ ಸಂಪರ್ಕ ಪಡೆದು ಕೊಂಡಿದ್ದಲ್ಲಿ ವಿದ್ಯುತ್ ಕಳ್ಳತನ ಪ್ರಕರಣ ಕೇಸು ದಾಖಲಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA